# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES
KANNADA DAILY

ಕನ್ನಡ ದಿನಪತ್ರಿಕೆ

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026









ಸಂಪುಟ:02 • ಸಂಚಿಕೆ: 251 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 11.04.2025 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue: 251 • PRGI No:KARKAN/2023/88055 • VIJAYANAGARA • 11.04.2025 • Friday • Page:04 • Rs:2


# ಸ್ವಯಂ ನಿಯಂತ್ರಣ, ಅಹಿಂಸೆ ತ್ಯಾಗ ಧ್ಯಾನದಿಂದ ಆತ್ಮಶುದ್ಧಿ

## ಮಹಾವೀರರ ಸಂದೇಶ ಪಾಲಿಸಿ | ಜಿಪಂ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ ಹೇಳಿಕೆ



■ **ಹಂಪಿ ಟೈಮ್ಸ್ ಹೊಸಪೇಟೆ**
ಜಗತ್ತಿನಲ್ಲಿ ಸಮಸ್ತ ಪ್ರಾಣಿ, ಕ್ರಿಮಿ-ಕೀಟ, ಗಿಡ-ಮರ ಎಲ್ಲವಕ್ಕೂ ಜೀವ ವಿದೆ. ಅವುಗಳಿಗೂ ನಮ್ಮಂತೆಯೇ ಬದುಕುವ ಹಕ್ಕಿದೆ ಎಂದು ವರ್ಧಮಾನ ಮಹಾವೀರರು ಪ್ರತಿಪಾದಿಸಿದ್ದಾರೆ ಎಂದು ಜಿಪಂ ಉಪಕಾರ್ಯದರ್ಶಿ ಭೀಮಪ್ಪ ಲಾಳಿ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲಾಡಳಿತದಿಂದ ಏರ್ಪಡಿಸಿದ್ದ ಮಹಾವೀರ ಜಯಂತಿಯಲ್ಲಿ ಪುಷ್ಪಾರ್ಚನೆ ಸಲ್ಲಿಸಿ ಅವರು ಗುರುವಾರ ಮಾತನಾಡಿದರು. ಪಂಪ ತನ್ನ ಎರಡು ಕೃತಿಗಳಲ್ಲಿ ಜಿನಧರ್ಮದ ಮಹಿಮೆಯನ್ನು ತಿಳಿಸಿದ್ದಾರೆ. 'ಜೀವದಯೆ ಜೈನಧರ್ಮಂ' ಎಂಬುದು ಜನ್ನನ ಮಾತಾಗಿದೆ. ಜೈನಧರ್ಮ 'ನೀನೂ ಬದುಕು, ಇತರರನ್ನೂ ಬದುಕಲು ಬಿಡು' ಎಂಬ ತತ್ವದ ತಳಪಾಯದಲ್ಲಿ ನಿಂತಿದೆ. ಅಹಿಂಸೆಯ ಶಾಂತಿಯ ಮಾರ್ಗ ಎಂದು 24 ನೇ ತೀರ್ಥಂಕರಾದ ಶ್ರೀಭಗವಾನ ಮಹಾವೀರರು ಬೋಧಿಸಿದ್ದಾರೆ. ಇಂದಿಗೂ ಅವರ ತತ್ವದ ಪಾಲನೆ ಅಗತ್ಯವಿದೆ. ಶಾಂತಿಯುತವಾಗಿ ಬದುಕಲು ಅಹಿಂಸೆ ಪಾಲನೆಯೇ ಸರಿಯಾದ ಮಾರ್ಗವಾಗಿದೆ. ಮಹಾವೀರರ ತತ್ವಾದರ್ಶಗಳನ್ನು ಇಂದಿನ ಯುವಕರು ಅಳವಡಿಸಿಕೊಳ್ಳಬೇಕಿದೆ. ಕೇವಲ ಜಯಂತಿ ಆಚರಣೆಯಿಂದ ಮಾತ್ರ ಅವರನ್ನು ಸ್ಮರಿಸದೇ ಅವರು ಬೋಧಿಸಿರುವ ಅಹಿಂಸಾ ಮಾರ್ಗವನ್ನು ಅನುಸರಿಸಿದಾಗ ಅವರ ಜಯಂತಿ ಆಚರಣೆ ಅರ್ಥಪೂರ್ಣವಾಗಲಿದೆ ಎಂದರು.

ಈ ವೇಳೆ ತಹಸೀಲ್ದಾರ ಕಾರ್ತೀಕ್ ಸೇರಿದಂತೆ ಜೈನ ಸಮುದಾಯದ ಮುಖಂಡರು ಭಾಗವಹಿಸಿದ್ದರು.

## ಎಂ. ಧರ್ಮನಗೌಡಗೆ ರಾಷ್ಟ್ರೀಯ ರತ್ನ ಪ್ರಶಸ್ತಿ

■ **ಹಂಪಿ ಟೈಮ್ಸ್ ಹೊಸಪೇಟೆ**
ವಿಜಯನಗರ ಜಿಲ್ಲಾ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ



ಜಿಲ್ಲಾ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಧರ್ಮನಗೌಡ ಇವರ ವೈದ್ಯಕೀಯ ಕ್ಷೇತ್ರದಲ್ಲಿನ ಸೇವೆಯನ್ನು ಪರಿಗಣಿಸಿ, ಅಂತರರಾಷ್ಟ್ರೀಯ ಮಾನವ ಅಭಿವೃದ್ಧಿ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ರಾಷ್ಟ್ರೀಯ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಿದೆ. ಏ. 20 ರಂದು ಪುಣೆಯಲ್ಲಿ ನಡೆಯಲಿರುವ ವಿಶ್ವವಿದ್ಯಾಲಯದ ಘಟಿಕೋತ್ಸವದ ಸಮಾರಂಭದಲ್ಲಿ ಪ್ರಶಸ್ತಿ ನೀಡಿ ಗೌರವಸಲಾಗುವುದು ಎಂದು ಮಂಡಳಿಯ ಮುಖ್ಯಸ್ಥರು ತಿಳಿಸಿದ್ದಾರೆ.

**ಆನಂದ ಬಾಣ**






ಚಿತ್ರ: ಕುಶ

ಹೊಸಪೇಟೆ ಹೊರವಲಯದ ಲೋಹಾದ್ರಿ ಬೆಟ್ಟದಲ್ಲಿರುವ ಶ್ರೀ ಜಂಬುನಾಥಸ್ವಾಮಿ ರಥೋತ್ಸವ ಗುರುವಾರ ಸಂಜೆ ವಿಜೃಂಭಣೆಯಿಂದ ಜರುಗಿತು.

# ಕೊಲೆ ಆರೋಪಿ ಬಂಧನಕ್ಕೆ ಫೈರಿಂಗ್

## ಹೊನ್ನೂರುಸ್ವಾಮಿ ಸಾವು | ಆರೋಪಿ ಕಾಳಿ ಅರೆಸ್ಟ್ | ಗಾಯಗೊಂಡ ಪೊಲೀಸರು





■ **ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಜಂಬುನಾಥ ರಸ್ತೆಯಲ್ಲಿ ಅಂಬೇಡ್ಕರ್ ನಗರದ 4ನೇ ಕ್ರಾಸ್ ಬಳಿ ಬುಧವಾರ ರಾತ್ರಿ ಹೊನ್ನೂರುಸ್ವಾಮಿಯನ್ನು (30) ಕಾಳಿ ಅಲಿಯಾಸ್ ಹುಚ್ಚಕಾಳಿ ಎಂಬಾತ ಚಾಕುವಿನಿಂದ ತಿವಿದು, ತಲೆಮೇಲೆ ಕಲ್ಲುಹಾಕಿ ಕೊಲೆ ಮಾಡಿರುವ ಘಟನೆ ಜರುಗಿದೆ.

ಕಳೆದ ಆರು ವರ್ಷಗಳ ಹಿಂದಿನ ವೈಷಮ್ಯ ಮರುಕಳಿಸಿದ್ದು, ಶ್ರೀ ಜಂಬುನಾಥಸ್ವಾಮಿ ಜಾತ್ರೆಗೆಂದು ದಾವಣಗೇರೆಯಿಂದ ಆಗಮಿಸಿದ್ದ ಹೊನ್ನೂರುಸ್ವಾಮಿಯನ್ನು ಕಾಳಿ ಕಾದು ಕೊಲೆ ಮಾಡಿ, ಪರಾರಿಯಾಗಿದ್ದನು. ಎಸ್ಪಿ ಶ್ರೀಹರಿಬಾಬು ಮತ್ತು ಡಿವೈಎಸ್ಪಿ ಮಂಜುನಾಥ ತಳವಾರ ಮಾರ್ಗದರ್ಶನದಲ್ಲಿ ಕೊಲೆ ಘಟನೆಯ ಬೆನ್ನತ್ತಿದ್ದ ಪಟ್ಟಣ ಠಾಣೆ ಪೊಲೀಸರು ಆರೋಪಿಗೆ ಬಲೆ ಬೀಸಿದ್ದರು. ಬೆಳಗಾಗುವಷ್ಟರಲ್ಲಿ ಪೊಲೀಸರು ಆರೋಪಿಯನ್ನು ಪತ್ತೆ ಹಚ್ಚಿ ವಶಕ್ಕೆ ಪಡೆದಿದ್ದಾರೆ. ವಶಕ್ಕೆ ಪಡೆದು ಕೊಲೆಗೆ ಬಳಸಿದ ಚಾಕು ಪತ್ತೆ ಸಂದರ್ಭದಲ್ಲಿ ನಗರದ ಹೊವಲಯದ ಮಹದೇವ ಇಂಡಸ್ಟ್ರೀಸ್ ಬಳಿ ಆರೋಪಿ ಪೊಲೀಸರ ಮೇಲೆ ದಾಳಿಗೆ ಯತ್ನಿಸಿದ್ದಾನೆ. ತನಿಖಾಧಿಕಾರಿ ಪಿ.ಐ. ಹುಲುಗಪ್ಪ ಆರೋಪಿ ಕಾಲಿಗೆ ಗುಂಡು ಹಾರಿಸಿದ್ದಾರೆ. ಆರೋಪಿ ವಶಕ್ಕೆ ಪಡೆಯುವ ಸಂದರ್ಭದಲ್ಲಿ ಪಟ್ಟಣ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಲಿಂಗರಾಜು ಮತ್ತು ಕಾನ್‌ಸ್ಟೇಬಲ್ ಕೊಟ್ರೇಶ ಗಾಯಗೊಂಡಿದ್ದಾರೆ.

ಎಸ್ಪಿ ಶ್ರೀ ಶ್ರೀಹರಿಬಾಬು, ಎಎಸ್ಪಿ ಸಲೀಂ ಪಾಷ ಮತ್ತು ಡಿವೈಎಸ್ಪಿ ಮಂಜುನಾಥ ತಳವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ನಂತರ ನೂರು ಹಾಸಿಗೆ ಆಸ್ಪತ್ರೆಯಲ್ಲಿ ಆರೋಪಿ ಮತ್ತು ಗಾಯಗೊಂಡ ಪೊಲೀಸರ ಆರೋಗ್ಯವನ್ನು ವಿಚಾರಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಕೊಲೆ ಘಟನೆ ಕುರಿತು ತನಿಖೆ ಕೈಗೊಳ್ಳಲಾಗಿದೆ ಎಂದು ಎಸ್ಪಿ ಡಾ. ಶ್ರೀಹರಿಬಾಬು ಹೇಳಿದರು.




# ಕೆರೆ-ಕಟ್ಟೆ ಒತ್ತುವರಿ ತೆರವುಗೊಳಿಸಿ ಸಿ.ಎಂ ಖಡಕ್ ಸೂಚನೆ

■ **ಹಂಪಿ ಟೈಮ್ಸ್ ಬೆಂಗಳೂರು**

ಕಂದಾಯ ಇಲಾಖೆ ಸರ್ಕಾರಕ್ಕೆ ಮಾತೃ ಇಲಾಖೆ ಇದ್ದಂತೆ. ಪೋಡಿಮುಕ್ತ ಗ್ರಾಮಗಳಾಗಬೇಕು. ಸರ್ವೇ ಕಾರ್ಯ ಪೂರ್ಣಗೊಳ್ಳಬೇಕು. ಪರವಾನಗಿ ಭೂಮಾಪಕರ ಕಾಯಂ ಮಾಡಲು ಗಂಭೀರ ಕ್ರಮದ ಜೊತೆಗೆ 36 ಎಡಿಎಲ್ಆರ್ ಗಳ ನೇಮಕ ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹತ್ವದ ಘೋಷಣೆ ಮಾಡಿದರು.



ವಿಧಾನಸೌಧದ ಭವ್ಯ ಮೆಟ್ಟಿಲುಗಳ ಮೇಲೆ ನಡೆದ ಭೂಮಾಪನ, ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ ಹಾಗೂ ಇಲಾಖೆಯ ನೌಕರರ ಸಂಘಗಳ 36ನೇ ರಾಷ್ಟ್ರೀಯ ಭೂಮಾಪನಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

> **ಕಂದಾಯ ಇಲಾಖೆ ಸರ್ಕಾರಕ್ಕೆ ಮಾತೃ ಇಲಾಖೆ ಇದ್ದಂತೆ:**
>
> **ಪರವಾನಗಿ ಭೂಮಾಪಕರ ಕಾಯಂ ಮಾಡಲು ಗಂಭೀರ ಕ್ರಮದ ಜೊತೆಗೆ 36 ADLR ಗಳ ನೇಮಕ ಮಾಡಲಾಗುವುದು: ಸಿ.ಎಂ ಸಿದ್ದರಾಮಯ್ಯ ಮಹತ್ವದ ಘೋಷಣೆ**

ಕಂದಾಯ ಇಲಾಖೆ ಸರ್ಕಾರದ ಮಾತೃ ಇಲಾಖೆ ರೀತಿ ಇದೆ. ಈ ಇಲಾಖೆ ಅಚ್ಚುಕಟ್ಟಾಗಿ ಕೆಲಸ ಮಾಡಿದರೆ ರೈತ ಸಮುದಾಯ ನೆಮ್ಮದಿಯಾಗಿರುತ್ತದೆ. ಕೃಷ್ಣಬೈರೇಗೌಡರ ನೇತೃತ್ವದಲ್ಲಿ ಕಂದಾಯ ಇಲಾಖೆಯಲ್ಲಿಅತ್ಯುತ್ತಮಕೆಲಸಗಳಾಗುತ್ತಿವೆ ಎಂದು ಮೆಚ್ಚುಗೆ ಸೂಚಿಸಿದರು.

ಕೃಷ್ಣಬೈರೇಗೌಡರು ಇಲಾಖೆಯನ್ನು ಚೆನ್ನಾಗಿ ಅರ್ಥಮಾಡಿಕೊಂಡು, ನಾಲಗೆ ತುದಿಯಲ್ಲಿ ಅಂಕಿ ಅಂಶ ಇಟ್ಟುಕೊಂಡಿರುವ ಸಮರ್ಥ ಮಂತ್ರಿ.

ಕೇವಲ ಮಂತ್ರಿ ಆದರೆ ಸಾಲದು. ಪರಿಣತಿ, ಕಾಳಜಿ ಇರಬೇಕು. ಇವೆರಡೂ ಕೃಷ್ಣಬೈರೇಗೌಡ ಅವರಲ್ಲಿದೆ ಎಂದು ಸಿಎಂ ಮೆಚ್ಚುಗೆ ಸೂಚಿಸಿದರು.

ನಾನು ಎರಡು ಬಾರಿ ಮುಖ್ಯಮಂತ್ರಿ ಆಗಿ ಕಂದಾಯ ಇಲಾಖೆಯ, ನೌಕರರ ಬಹಳಷ್ಟು ಸಮಸ್ಯೆಗಳನ್ನು ಬಗೆಹರಿಸಿದ್ದೇನೆ. ಪೂರ್ತಿ ಸಮಸ್ಯೆ ಬಗೆಹರಿದಿಲ್ಲ ಎನ್ನುವ ಬೇಸರ ನನಗೂ ಇದೆ. ತಹಶೀಲ್ದಾರ್, ಎಸಿ ಕಚೇರಿಗಳಲ್ಲಿ ಸುಗಮವಾಗಿ, ಪ್ರಾಮಾಣಿಕವಾಗಿ ಕೆಲಸಗಳು ಆದರೆ ನಾಡಿನ ಜನತೆ, ರೈತ ಸಮುದಾಯ ಅತ್ಯಂತ ನೆಮ್ಮದಿಯಾಗಿರುತ್ತದೆ ಎಂದರು.

ಕಂದಾಯ ಇಲಾಖೆಗೆ ಅಗತ್ಯ ಇರುವಷ್ಟು ಹಣ ಕೊಟ್ಟಿದ್ದೇವೆ, ಮುಂದೆಯೂ ಕೊಡುತ್ತೇವೆ. ಅಗತ್ಯ ಸಿಬ್ಬಂದಿ ಬಲವನ್ನೂ ಕೊಟ್ಟಿದ್ದೇವೆ. ಅಗತ್ಯ ಇದ್ದರೆ ಮತ್ತೂ ಕೊಡುತ್ತೇನೆ. ಖಾಲಿ ಇರುವ ಎಲ್ಲಾ ಸರ್ವೇಯರ್ ಹುದ್ದೆಗಳ ನೇಮಕಾತಿ ಅತ್ಯಂತ ಪಾರದರ್ಶಕವಾಗಿ ಆಗಿದೆ. ಸದ್ಯದಲ್ಲೇ ನೇಮಕಾತಿ ಪತ್ರವನ್ನೂ ಕೊಡುತ್ತೇವೆ ಎಂದರು. ಹಿಂದೆ ಗೋವಿಂದೇಗೌಡರು ಪ್ರಾಮಾಣಿಕವಾಗಿ ಒಂದು ಲಕ್ಷ ಶಿಕ್ಷಕರ ನೇಮಕಾತಿ ಆಗಿರುವ ರೀತಿಯಲ್ಲೇ ಕೃಷ್ಣಬೈರೇಗೌಡರು ಸರ್ವೇಯರ್ ಗಳ ನೇಮಕಾತಿ ಮಾಡಿದ್ದಾರೆ.

ಪರವಾನಗಿ ಭೂಮಾಪಕರ ಕಾಯಂ ಮಾಡಲು ಗಂಭೀರ ಚಿಂತನೆ ಮಾಡಲಾಗುವುದು. ಜೊತೆಗೆ 36 ಮಂದಿ ಎಡಿಎಲ್ ಆರ್ ಗಳ ನೇಮಕವನ್ನೂ ಸದ್ಯದಲ್ಲೇ ಮಾಡಲಾಗುವುದು ಎಂದು ಘೋಷಿಸಿದರು.

ನಮ್ಮದು ಹಳ್ಳಿಗಳ ಮತ್ತು ರೈತರ ದೇಶ. ಗ್ರಾಮಗಳು ಮತ್ತು ರೈತರು ನೆಮ್ಮದಿಯಾಗಿ ಉತ್ಪಾದನೆಯಲ್ಲಿ ತೊಡಗಬೇಕಾದರೆ ಸರ್ವೇ ಕಾರ್ಯ ಸರಿಯಾಗಿ ಪೂರ್ಣಗೊಳ್ಳಬೇಕು. ಕೆರೆ ಕಟ್ಟೆಗಳ ಒತ್ತುವರಿ ತೆರವುಗೊಳಿಸಬೇಕು, ಪೋಡಿ ಮುಕ್ತ ಗ್ರಾಮಗಳಾಗಬೇಕು. ಇದಕ್ಕಾಗಿ ಇಲಾಖೆಯ ಪ್ರತಿಯೊಬ್ಬರೂ ಪ್ರಾಮಾಣಿಕವಾಗಿ ಶ್ರಮಿಸಿ, ಧ್ವನಿ ಇಲ್ಲದವರ ಪರವಾಗಿ ಕೆಲಸ ಮಾಡುವುದೇ ನಿಜವಾದ ಪುಣ್ಯದ ಕಾರ್ಯ ಎಂದು ಕರೆ ನೀಡಿದರು.

ಪ್ರತೀ ವರ್ಷ ರಾಷ್ಟ್ರೀಯ ಭೂಮಾಪನ ದಿನಾಚರಣೆಯನ್ನು ಪ್ರತೀ ವರ್ಷ ಆಚರಿಸಬೇಕು ಎಂದು ಸೂಚಿಸಿದರು.

ಶಾಸಕ ರಿಜ್ವಾನ್ ಅರ್ಷದ್ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಸಚಿವರಾದ ಕೃಷ್ಣಬೈರೇಗೌಡ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಮುಖ್ಯ ಸಚೇತಕ ಅಶೋಕ್ ಪಟ್ಟಣ್ ಸೇರಿದಂತೆ ಹಲವು ಪ್ರಮುಖರು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**-: ಸಂಪಾದಕರು :-**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ-ಮೇಲ್:hampitimes@gmail.com

M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

# ಅಕ್ಕಮಹಾದೇವಿಯ ಅನುಭಾವಿಕ ನೆಲೆಗಳು

■ **ಶೇಖರಯ್ಯ ಟಿ ಎಚ್ ಎಂ ಗೆದ್ದಲಗಟ್ಟೆ.**

ಹನ್ನೆರಡನೆಯ ಶತಮಾನದ ವಚನ ಚಳುವಳಿಯನ್ನು ಸಮಸಮಾಜ ನಿರ್ಮಾಣದ ಚಿಂತನೆಯ ಪರ್ವಕಾಲವೆಂದೆ ಹೇಳಬಹುದು. ಅವರಿವರೆನ್ನದೆ,ಲಿಂಗಭೇದವಿಲ್ಲದೆ ಹಲವಾರು ಶರಣ ಶರಣೆಯರು ತಮ್ಮ ತಮ್ಮ ಕಾಯಕದಲ್ಲಿ ನಿರತಗೊಂಡು, ತಮ್ಮ ಅನುಭಾವಿಕ ನೆಲೆಗಳಲ್ಲಿ ಮಹತ್ತರ ವಚನಗಳನ್ನು ಬರೆದಿದ್ದಾರೆ. ಹೀಗೆ ತಮ್ಮ ವಚನಗಳ ಮೂಲಕ ಸಮಚಿತ್ತತೆಯ ಮಹತ್ತನ್ನು,ನಿಶ್ಚಿಂತಭಾವದ ಅಗತ್ಯವನ್ನು, ಅನುಭಾವಿಗಳ ಸಂಗದ ಹಿರಿಮೆಯನ್ನು ಹೇಳಿದ ಶ್ರೇಷ್ಠವಚನಕಾರ್ತಿ, ಶಿವಶರಣೆ ಅಕ್ಕಮಹಾದೇವಿಯವರು.




ಅಕ್ಕಮಹಾದೇವಿಯವರ ವಚನಗಳಲ್ಲಿ ಕಂಡುಬರುವ ಅನುಭಾವಿಕ ನೆಲೆಗಳು....

**1. ಸಮಚಿತ್ತಭಾವಕ್ಕೆ ಒತ್ತು....**

ಅಕ್ಕನ ವಚನಗಳಲ್ಲಿ ಒಂದಾದ "ಬೆಟ್ಟದ ಮೇಲೊಂದು ಮನೆಯ ಮಾಡಿ......" ವಚನದ ಕೊನೆಯಲ್ಲಿ ಬರುವ.... "ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಡೆ ಮನದಲ್ಲಿ ಕೋಪವತಾಳದೆ ಸಮಾಧಾನಿಯಾಗಿರಬೇಕು" ಎಂಬ ಮಾತುಗಳು,ಜಗತ್ತಿನಲ್ಲಿ ನಾವು ಹುಟ್ಟಿದ ಮೇಲೆ ಹೊಗಳಿಕೆ ಮತ್ತು ತೆಗಳಿಕೆಗಳು ಎದುರಾಗುವುದು ಸಹಜ.ಹೊಗಳಿಕೆಗೆ ಹಿಗ್ಗದೆ,ತೆಗಳಿಕೆಗೆ ಕುಗ್ಗದೆ ಸಮಚಿತ್ತಭಾವವನ್ನು ತಾಳಿ ಸಮಾಧಾನದಿಂದ ಬದುಕಬೇಕೆಂಬುದನ್ನು ತಿಳಿಸುತ್ತವೆ.

**2. ನಿಶ್ಚಿಂತಭಾವಕ್ಕೆ ಒತ್ತು....**

ಇವರ ಮತ್ತೊಂದು ವಚನವಾದ....
ಹೆದರದಿರು ಮನವೇ ಬೆದರದಿರು ಮನವೇ,
ನಿಜವನರಿತು ನಿಶ್ಚಿಂತವಾಗಿರು,
ಫಲವಾದ ಮರನ ಕಲ್ಲಲಿ ಇಡುವುದೊಂದು ಕೋಟಿ
ಎಲವದ ಮರನ ಇಡುವರೊಬ್ಬರ ಕಾಣೆ



ಭಕ್ತಿಯುಳ್ಳವರ ಬೈವರೊಂದು ಕೋಟಿ
ಭಕ್ತಿ ಇಲ್ಲದವರ ಬೈವರೊಬ್ಬರ ಕಾಣೆ
ನಿಮ್ಮ ಶರಣರ ನುಡಿಯೇ ಎನಗೆ ಗತಿ,ಸೋಪಾನ ಚೆನ್ನಮ್ಮಲ್ಲಿಕಾರ್ಜುನ.

ಹೆದರದೆ ಬೆದರದೇ ನಿಜವನರಿತು ನಿಶ್ಚಿಂತನಾಗಿರಬೇಕು. ಲೋಕದಲ್ಲಿ ಕೋಟ್ಯಾಂತರ ಜನರು ಫಲಭರಿತವಾದ ಮರಕ್ಕೆ ಕಲ್ಲಿನಿಂದ ಬೀರುತ್ತಾರೆ. ಫಲವಿಲ್ಲದ ಬೋಳು ಮರಕ್ಕೆ ಯಾರು ಕಲ್ಲೆಸೆಯಲಾರರು. ಅಂತೆಯೇ ಭಕ್ತಿಯುಳ್ಳ ಜನರನ್ನು ಬೈಯ್ಯುವವರು ಜಾಸ್ತಿ.ಭಕ್ತಿ ಇಲ್ಲದವರ ಬಗ್ಗೆ ಸೊಲ್ಲೆತ್ತರು. ಹೀಗಾಗಿ ಅವರಿವರು ಆಡುವ ಮಾತುಗಳಿಗೆಲ್ಲ ಧೃತಿಗೆಡದೆ, ಶರಣರ ನುಡಿಗಳನ್ನು ಕೇಳುತ್ತಾ ಹೆದರದೆ ಉನ್ನತ ಮಾರ್ಗದಲ್ಲಿ ನಡೆಯುವುದೇ ಶ್ರೇಷ್ಠ ಎಂಬುದು ಅಕ್ಕನ ನೀತಿಯಾಗಿದೆ.

**3. ಅನುಭಾವಿಗಳ ಸಂಗದ ಮಹತ್ವ.....**

ಸಂಗದಿಂದಲ್ಲದೆ ಅಗ್ನಿಹುಟ್ಟದು,
ಸಂಗದಿಂದಲ್ಲದೆ ಬೀಜ ಮೊಳೆದೋರದು,
ಸಂಗದಿಂದಲ್ಲದೆ ಹೂವಾಗದು,
ಸಂಗದಿಂದಲ್ಲದೆ ಸರ್ವಸುಖದೋರದು,
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಮಹಾನುಭಾವಿಗಳ ಸಂಗದಿಂದಲಾನು
ಪರಮಸುಖಿಯಾದೆನಯ್ಯಾ!

ಈ ವಚನದಲ್ಲಿ ಅನುಭಾವಿಗಳ, ಸಜ್ಜನರ ಸಂಗದ ಮಹತ್ತನ್ನು ಬಹು ಸೂಕ್ಷ್ಮವಾಗಿ ಹೇಳಿದ್ದಾರೆ. ಉತ್ತಮಿಕೆಯನ್ನು ಕಾಣಬೇಕಾದರೆ ಮತ್ತೊಂದು ಉತ್ತಮಿಕೆಯ ಸಹವಾಸದಿಂದ ಮಾತ್ರ ಸಾಧ್ಯ. ಹೀಗಾಗಿ ನಿಮ್ಮ ಮಹಾನುಭಾವಿಗಳ ಸಂಗದಿಂದ ಲಾನು ಪರಾಮಸುಖಿಯಾದೆನಯ್ಯ ಎನ್ನುತ್ತಾ ಅನುಭಾವಿಗಳ ಸಂಗದ ಹಿರಿಮೆಯನ್ನು ಒತ್ತಿ ಹೇಳಿದ್ದಾರೆ.

**4. ಜ್ಞಾನವಿಲ್ಲದ ಜೀವನ ನಿರರ್ಥಕ....**

ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ?
ಚೆನ್ನಮಲ್ಲಿಕಾರ್ಜುನ....

ಧರ್ಮ....ದೇವರು.... ಸಮಾಜ ಕುರಿತಾದ ಜ್ಞಾನವಿಲ್ಲದವರ ಜೀವನ ನಿಷ್ಪ್ರಯೋಜಕ ಮತ್ತು ವ್ಯರ್ಥ ಎಂಬುದು ಅಕ್ಕನ ಅಭಿಮತ. ನೆರಳಿಲ್ಲದ ಮರದಿಂದ ಪ್ರಯೋಜನವಿಲ್ಲ. ದಯೆ ಇಲ್ಲದವನ ಬಳಿ ಧನವಿದ್ದರೂ ವ್ಯರ್ಥ. ಹಾಲು ಕೊಡದಿರುವ ಹಸಿವಿನಿಂದ ಏನು ಪ್ರಯೋಜನ? ಗುಣವಿಲ್ಲದಿರೆ ರೂಪವೂ ವ್ಯರ್ಥ. ಪ್ರಸಾದವಲ್ಲದ ಪದಾರ್ಥ ನಿಷ್ಪ್ರಯೋಜಕ. ಅಂತೆಯೇ ತಾನು ಸಹ ಚೆನ್ನಮಲ್ಲಿಕಾರ್ಜುನ ದೇವನ ಜ್ಞಾನವಿಲ್ಲದೆ ಬದುಕಿದರೆ ಪ್ರಯೋಜನವಿಲ್ಲವೆಂದಿದ್ದಾರೆ.

# ಅರಿವು ಮೂಡಿದಾಗ

ಮಲಗಿದ್ದ ಸುಮ ಮಗ್ಗಲು ಬದಲಿಸಿದಳು ಅಷ್ಟೇ ಕಿಬ್ಬೊಟ್ಟೆಯಾಳದಿಂದ ಅದೇನೋ ನುಗ್ಗಿ ಬಂದಂತೆ ಭಾಸವಾಗಿ ನಿಧಾನವಾಗಿ ಎದ್ದವಳೇ ವಾಶ್ ಬೇಸಿನನೆಡೆ ಬರುವಷ್ಟರಲ್ಲಿ ಹೊಟ್ಟೆಯೆಲ್ಲ ತೊಳಸಿದಂತಾಗಿ ನಿನ್ನೆ ರಾತ್ರಿ ಉಂಡದ್ದೆಲ್ಲವೂ ಹಾಗೆಯೇ ಹೊರಬಂತು.

ಒಂದು ಕ್ಷಣ ಕಣ್ಣು ಕತ್ತಲಿಟ್ಟಂತಾದರೂ ಸಾವರಿಸಿಕೊಂಡ ಸುಮ ನಿಧಾನವಾಗಿ ಬಾಯಿಗೆ ನೀರು ಹಾಕಿ ತೊಳೆದುಕೊಂಡು ಮುಖ ತೊಳೆದು ಮತ್ತೆ ಬಂದು ಮಂಚದ ಮೇಲೆ ಒರಗಿದಳು. ಖಾಲಿಯಾದ ಹೊಟ್ಟೆ ಸಂಕಟ ಒಂದೆಡೆ ಆದರೆ ಮನದ ಬೇಗುದಿ ಮತ್ತೊಂದೆಡೆ ಆಕೆಯನ್ನು ನೋಯಿಸುತ್ತಿತ್ತು.

ಹಾಗೆಯೇ ಹಿಂದಕ್ಕೆ ಒರಗಿ ಪಕ್ಕಕ್ಕೆ ತಿರುಗಿ ನೋಡಿದರ

ಇದಾವುದರ ಪರಿವೆಯೇ ಇಲ್ಲದೆ ಗೊರಕೆ ಹೊಡೆಯುತ್ತಿದ್ದ ಪತಿ ಮಹೇಶನನ್ನು ಕಂಡು ನೋವಿನ ನಿಟ್ಟುಸಿರು ಹೊರಬಂತು. ಮನಸ್ಸು ಹಿಂದಿನ ದಿನಗಳನ್ನು ನೆನೆಯಿತು.

ಸಾಧಾರಣ ಮಧ್ಯಮ ವರ್ಗದ ಕುಟುಂಬ ಪರಮೇಶ್ವರ ಮತ್ತು ಪಾರ್ವತಿ ದಂಪತಿಗಳದ್ದು. ಅವರಿಬ್ಬರ ಮಧ್ಯದ ಕುಡಿಯಾದ ಸುಮಾ ಅಣ್ಣ ಸುರೇಶ ಮತ್ತು ತಮ್ಮ ರಮೇಶರ ಜೊತೆಯಲ್ಲಿ ಉಳಿದೆಲ್ಲ ಮಧ್ಯಮ ವರ್ಗದ ಕುಟುಂಬಗಳಂತೆಯೇ ಬೆಳೆದಳು. ವೃತ್ತಿಪರ ಕೋರ್ಸುಗಳನ್ನು ಓದಿಸಲು ತಂದೆ ತಾಯಿಯರಿಗೆ ಸಾಧ್ಯವಾಗುವುದಿಲ್ಲ ಎಂಬುದನ್ನು ಅರಿತ ಸುಮಾ ವಾಣಿಜ್ಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವ ಹೊತ್ತಿಗೆ ದೂರದ ಅರಬ್ ದೇಶದಲ್ಲಿ ಇಂಜಿನಿಯರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಮಹೇಶನ ಸಂಬಂಧ ಒದಗಿ ಬಂದಿತು.

ಯಾವುದೇ ರೀತಿಯ ಬೇಡಿಕೆಗಳು ವರನ ಕಡೆಯಿಂದ ಬರದೇ ಹೋದರೂ ತಮ್ಮ ಮಿತಿಗೆ ತಕ್ಕಂತೆ ಪರಮೇಶ್ವರಯ್ಯ ಮತ್ತು ಪಾರ್ವತಿ ದಂಪತಿಗಳು ಅಚ್ಚುಕಟ್ಟಾಗಿ ಮದುವೆ ಮಾಡಿಕೊಟ್ಟರು. ಯಾವ ತಕರಾರು ಇಲ್ಲದೆ ಮದುವೆಯನ್ನು ಪೂರೈಸಿ ಗಂಡನ ಮನೆಗೆ ತೆರಳಿದ ಸುಮ ಅಲ್ಲಿಂದಲೇ ಗಂಡನೊಂದಿಗೆ ವಿದೇಶಕ್ಕೆ ಹಾರಿದಳು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಈಗಾಗಲೇ ಅಮ್ಮನ ಕೈ ಕೆಳಗೆ ಅಡುಗೆ, ಮನೆ ಕೆಲಸಗಳ ತರಬೇತಿ ಪಡೆದಿದ್ದ ಸುಮಾಳಿಗೆ ದೂರದ ಅರಬ್ ದೇಶದಲ್ಲಿ ಮನೆ ವಾರ್ತೆಯನ್ನು ನಿಭಾಯಿಸುವುದು ಅಷ್ಟೇನೂ ತೊಂದರೆ ಆಗಲಿಲ್ಲ. ಆಕರ್ಷಕವಾದ ನೀಳಕಾಯ, ಗೋಧಿ ಬಣ್ಣ ಮತ್ತು ಉದ್ದನೆಯ ಕೂದಲಿನ ಬಟ್ಟಲು ಕಂಗಳ ಸುಮಾ ಸ್ಪುರದ್ರೂಪಿ ಮಹೇಶನಿಗೆ ತಕ್ಕ ಜೋಡಿಯಾಗಿದ್ದಳು. ಒಳ್ಳೆಯ ಉದ್ಯೋಗ, ಕೈ ತುಂಬಾ ಸಂಬಳ, ಸುಂದರವಾದ ಮಡದಿ, ದೂರ ದೇಶದ ಸ್ವಚ್ಛಂದ ಜೀವನ ಮತ್ತಿನ್ನೇನು ಬೇಕು ಸ್ವರ್ಗಕ್ಕೆ ಕಿಚ್ಚು ಹಚ್ಚಲು ಎನ್ನುವಂತೆ ಅವರ ಜೀವನ ಸಾಗಿತ್ತು.

ಸ್ವಭಾವತಹ ಮಧ್ಯಮ ವರ್ಗದ ಸಂತೃಪ್ತ ಮನಸ್ಥಿತಿಯ ಹೆಣ್ಣು ಮಗಳಾದ ಸುಮ ಕೂಡ ಪತಿಯ ಇಚ್ಛೆಗೆ ತಕ್ಕಂತೆ ತನ್ನನ್ನು ತಾನು ಒಗ್ಗಿಸಿಕೊಂಡು ಹೋಗುತ್ತಿದ್ದಳು. ಮಧುಚಂದ್ರದ ಅವಧಿ ಆರು ತಿಂಗಳವರೆಗೆ ವ್ಯಾಪಿಸಿತು. ಆಗಾಗ ತಂದೆ ತಾಯಿಗೆ ವಿಡಿಯೋ ಕಾಲ್ ಮಾಡಿ ಮಾತನಾಡುತ್ತಿದ್ದ ಸುಮ ಅಣ್ಣ ತಮ್ಮಂದಿರ ತಮಾಷೆ,



ಕೀಟಲೆಯ ಮಾತುಗಳಿಗೆ ನಸುಮುನಿದರೂ ಮುಖದಲ್ಲಿನ ಸಂತಸದ ಭಾವವನ್ನು ಕಂಡು ಅವರು ಕೂಡ ನೆಮ್ಮದಿಯನ್ನು ತಾಳುತ್ತಿದ್ದರು.

ಇವರಿಬ್ಬರ ಮಧುರ ದಾಂಪತ್ಯದ ಫಲವಾಗಿ ಆ ದಿನ ಮುಂಜಾನೆ ಏಳುತ್ತಲೇ ಸ್ವಲ್ಪ ತಲೆ ಸುತ್ತಿದಂತಾಗಿ ಅಲ್ಲಿಯೇ ಇದ್ದ ಡೈನಿಂಗ್ ಟೇಬಲ್ನ ಕುರ್ಚಿಗೆ ಬ ಒರಗಿ ಕುರಿತ ಸುಮಾ ತನ್ನ ತಿಂಗಳ ಮುಟ್ಟಿನ ಅವಧಿ ಮುಂದೆ ಹೋಗಿರುವುದನ್ನು ನೆನೆದು ಮುದಗೊಂಡಳು.

ಕೂಡಲೇ ಈ ಮೊದಲೇ ತಂದಿಟ್ಟುಕೊಂಡ ಪ್ರೆಗ್ನೆನ್ಸಿ ಕಿಟ್ಟನ್ನು ತೆಗೆದುಕೊಂಡು ಪರಿಶೀಲಿಸಿದಾಗ ಗುಲಾಬಿ ಬಣ್ಣದ ಗೆರೆಗಳನ್ನು ಕಂಡು ಮನಸ್ಸು ಆಕಾಶದಲ್ಲಿ ಗರಿಗೆದರಿ ಹಾರಾಡಿದಂತೆ ಭಾಸವಾಯಿತು. ಕೂಡಲೇ ಗಂಡನನ್ನು ಎಬ್ಬಿಸಿ ವಿಷಯವನ್ನು ಅರುಹಿದಾಗ ಆತನ ಸಂತಸಕ್ಕೆ ಪಾರವೇ ಇಲ್ಲದಂತಾಗಿ ಪತ್ನಿಯನ್ನು ಮನಸಾರೆ ಮುದ್ದಿಸಿದ ಮಹೇಶ. ಇಬ್ಬರ ಮನೆಗಳಲ್ಲೂ ಈ ಸಂತಸದ ವಿಷಯ ತಲುಪಿ ಅವರು ಕೂಡ ಹರುಷದಿಂದ ಶುಭ ಹಾರೈಸಿದರು.

ಆದರೆ ಸಮಸ್ಯೆ ಶುರುವಾದದ್ದೇ ಇಲ್ಲಿಂದ. ದಿನೇ ದಿನೇ ಸುಮಾಳ ವಾಂತಿ ಹೆಚ್ಚಾಯಿತು. ಸುಗಂಧದ್ರವ್ಯ ಊದಿನ ಕಡ್ಡಿ, ಈರುಳ್ಳಿ ವಾಸನೆ, ಬೇಳೆ ಕುದಿಯುವ ವಾಸನೆ ಹೀಗೆ ಎಲ್ಲ ರೀತಿಯ ವಾಸನೆಗಳಿಗೆ ಆಕೆಯ ದೇಹ ಸ್ಪಂದಿಸದೆ ಉಂಡದ್ದೆಲ್ಲವೂ ವಾಂತಿಯ ಮೂಲಕ ಹೊರಬೀಳತೊಡಗಿತು.

ವೈದ್ಯರ ಬಳಿ ಚಿಕಿತ್ಸೆಗೆ ಹೋದಾಗ ಗರ್ಭಿಣಿಯರಲ್ಲಿ ಇದು ಸಾಮಾನ್ಯ ಎಂದು ಆಕೆಗೆ ಅವಶ್ಯಕವಾದ ಪೋಷಕಾಂಶಗಳನ್ನು ಒದಗಿಸುವ ಮಾತ್ರೆ, ಇಂಜೆಕ್ಷನ್ ಗಳನ್ನು ನೀಡಿ ಪ್ರತಿ ತಿಂಗಳು ನಿಗದಿತವಾಗಿ ತಪಾಸಣೆಗೆ ಬರಬೇಕೆಂದು ತಾಕೀತು ಮಾಡಿ ಕಳುಹಿಸಿದರು.

ಏನನ್ನು ಕಂಡರೂ ವಾಂತಿಯಾಗುವ, ಊಟ ಸೇರದೆ ಹೋದರೂ ಗರ್ಭಿಣಿಯ ಕಳೆ ಮುಖದಲ್ಲಿ ಮನೆ ಮಾಡಿತು.. ಮುಂದಿನ ದಿನಗಳಲ್ಲಿ ಬಸಿರಿನ ನಿತ್ರಾಣ, ವಾಂತಿ ತಲೆ ತಿರುಗುವಿಕೆಗಳು ಆಕೆಯನ್ನು ಮತ್ತಷ್ಟು ಹಾಸಿಗೆಗೆ ಅಂಟಿಕೊಳ್ಳುವಂತೆ ಮಾಡಿದವು. ದೈಹಿಕವಾಗಿ ನಿತ್ರಾಣಗೊಂಡ ಮನಸ್ಸು ಸದಾ ವಿಶ್ರಾಂತಿಯನ್ನು ಬಯಸುತ್ತಿತ್ತು ಪರಿಣಾಮವಾಗಿ ಮನೆಯ ಎಲ್ಲಾ ಕೆಲಸಗಳಲ್ಲಿ ಅಸ್ತವ್ಯಸ್ತತೆ.. ಕೋಳಿ ಗೂಡಿನಂತಹ ಅಪಾರ್ಟ್ಮೆಂಟ್ನ ಮನೆಯಲ್ಲಿ ಆಕೆಯ ವಾಂತಿಯನ್ನು ಅದೆಷ್ಟೇ ತೊಳೆದರೂ ಹೋಗಲಾರದಂತಹ ಒಂದು ರೀತಿಯ ಅಸಹನೀಯ ವಾಸನೆ ಮನೆಯನ್ನು ಆವರಿಸಿತು.

ಈ ಸಮಯದಲ್ಲಿ ಗಂಡನ ಅಸಹನೆ, ಕಿರಿಕಿರಿಗಳು ಕೂಡ ಹೆಚ್ಚಾಗಿ ಆತ ಆಕೆಯನ್ನು ಕಡೆಗಣಿಸಿ ಆಫೀಸಿನ ಕೆಲಸವನ್ನು ಪೂರೈಸಿ ಅಲ್ಲಿಲ್ಲಿ ಸುತ್ತಾಡಿ ಊಟ ಮಾಡಿ ಮನೆಗೆ ಬಂದು ಮಲಗಿಬಿಡುತ್ತಿದ್ದ. ಬಸಿರಿನ ಭಾರದಿಂದ ಒದ್ದಾಡುತ್ತಿದ್ದ ಹೆಂಡತಿಗೆ ಹೊರಗಿನಿಂದ ಏನನ್ನಾದರೂ ತಂದು ಕೊಡುವುದಾಗಲಿ , ಮನೆಯಲ್ಲಿ ಏನನ್ನಾದರೂ ತಿನ್ನಲು ಮಾಡಿ ಕೊಡುವುದಾಗಲಿ ದೂರ..... ಏನಾದರೂ ಮಾಡಿಕೊಂಡು ತಿಂದೆಯಾ? ಎಂದು ಕೂಡ ಆತ ಕೇಳುತ್ತಿರಲಿಲ್ಲ.

ಅದೊಂದು ದಿನ ವಾಂತಿ ಮಾಡಿ ಸುಸ್ತಾಗಿದ್ದ ಆಕೆ ಅಲ್ಲಿ ಚೆಲ್ಲಿದ್ದ ನೀರಿನ ಮೇಲೆ ಕಾಲಿಟ್ಟು ಜಾರಿ ಬಿದ್ದಾಗ ಕಿರುಚಿ ಪ್ರಜ್ಞೆ ತಪ್ಪಿದಳು. ಪಕ್ಕದ ಅಪಾರ್ಟ್ಮೆಂಟ್ನಲ್ಲಿದ್ದ ಮಧ್ಯ ವಯಸ್ಸಿನ ಹೆಣ್ಣು ಮಗಳು ಓಡಿಹೋಗಿ ಅಪಾರ್ಟ್ಮೆಂಟ್ನ ಸೆಕ್ಯೂರಿಟಿಯನ್ನು ಕರೆತಂದು ಆಕೆಯ ಮನೆಯ ಬಾಗಿಲನ್ನು ತೆರೆಸಿ ನೋಡಿ ಎಚ್ಚರ ತಪ್ಪಿ ಬಿದ್ದ ಆಕೆಯನ್ನು ಕೂಡಲೇ ಆಸ್ಪತ್ರೆಗೆ ಸೇರಿಸಿದರು.. ಆಕೆಯ ಪತಿಯ ಮೊಬೈಲ್ ನಂಬರ್ ಯಾರ ಬಳಿಯೂ ಇರಲಿಲ್ಲವಾದ್ದರಿಂದ ಸೆಕ್ಯೂರಿಟಿಗೆ ಕರೆ ಮಾಡಿ ಆಕೆಯ ಗಂಡ ಬಂದ ಮೇಲೆ ವಿಷಯವನ್ನು ತಿಳಿಸಲು ಹೇಳಿದರು.

ರಾತ್ರಿ ಮನೆಗೆ ಬಂದ ಮಹೇಶನನ್ನು ಕಂಡೊಡನೆ ಆತನ ಬಳಿ ಹೋದ ಸೆಕ್ಯೂರಿಟಿ ವಿಷಯವನ್ನು ತಿಳಿಸಿದ ಕೂಡಲೇ ಆಸ್ಪತ್ರೆಗೆ ಧಾವಿಸಿ ಹೋದನು. ಕೈಗೆ ಡ್ರಿಪ್ ಹಾಕಲಾಗಿದ್ದು ಆಸ್ಪತ್ರೆಯ ಬಟ್ಟೆಗಳನ್ನು ಧರಿಸಿ ಮಲಗಿದ್ದ ಪತ್ನಿಯನ್ನು, ಆಕೆಯ ಪಕ್ಕದಲ್ಲಿಯೇ ಸೇಬು ಹಣ್ಣನ್ನು ಕತ್ತರಿಸಿ ಕೊಡುತ್ತ ಮೆಲುವಾಗಿ ಮಾತನಾಡುತ್ತಿದ್ದ ಮಧ್ಯ ವಯಸ್ಸಿನ ಮಹಿಳೆಯನ್ನು ಕಂಡು ನಿರಾಳವಾದನು.

ಒಳ ಹೋಗಲು ಅನುಮತಿ ಪಡೆದು ಪತ್ನಿಯ ಬಳಿ ಸಾರಿದ ಆತನನ್ನು ನೋಡಿದ ಪಕ್ಕದ ಮನೆಯ ಹೆಣ್ಣು ಮಗಳು ದಂಪತಿಗಳು ಮಾತನಾಡಿಕೊಳ್ಳಲಿ ಎಂದು

ಆ ಕೋಣೆಯಿಂದ ಹೊರಗೆ ಹೋದಳು. ಪತಿಯನ್ನು ನೋಡಿ ಕಣ್ಣಂಚಿನಲ್ಲಿ ನೀರು ತುಂಬಿಕೊಂಡಿದ್ದರೂ ಏನೊಂದೂ ಮಾತನಾಡದೆ ಮಗ್ಗಲು ಹೊರಳಿ ಮುಖವನ್ನು ತಿರುಗಿಸಿದ ಆಕೆಯನ್ನು ನೋಡಿದಾಗ ಆತನಿಗೆ ಇದುವರೆಗೆ ತಾನು ನಡೆದುಕೊಂಡ ರೀತಿಯ ನೆನಪಾಗಿ ಪಶ್ಚಾತ್ತಾಪವಾಯಿತು.

ಹೊರಗೆ ಬಂದು ಆಸ್ಪತ್ರೆಯ ಕಾರಿಡಾರಿನ ಕುರ್ಚಿಯಲ್ಲಿ ಕುಳಿತಾಗ ಕಳೆದ ಕೆಲವು ದಿನಗಳಿಂದ ತನ್ನ ಕುಟುಂಬದ ಮುಂದಿನ ವಾರಸುದಾರನನ್ನು ತನ್ನ ಉದರದಲ್ಲಿ ಹೊತ್ತಿದ್ದ ಆಕೆ ಬಹಳಷ್ಟು ಬಳಲುತ್ತಿದ್ದರೂ ಕಾಳಜಿ ಮಾಡದ ತನ್ನ ನಡವಳಿಕೆ ಆತನಿಗೆ ನಾಚಿಕೆಯನ್ನು ತರಿಸಿತ್ತು. ಆಸ್ಪತ್ರೆಯ ಕಾರಿಡಾರಿನ ಮತ್ತೊಂದು ಕುರ್ಚಿಯಲ್ಲಿ ಕುಳಿತಿದ್ದ ಪಕ್ಕದ ಮನೆಯ ಹೆಣ್ಣು ಮಗಳನ್ನು ಕುರಿತು ಧನ್ಯವಾದಗಳನ್ನು ಅರ್ಪಿಸಿದ.

ಹೆಣ್ಣು ಮಕ್ಕಳಿಗೆ ಬೇಕಾಗಿರುವುದು ತುಸು ಕಾಳಜಿ, ಪ್ರೀತಿ ಮತ್ತು ನಾನು ನಿನ್ನೊಂದಿಗೆ ಇದ್ದೇನೆ ಎಂಬ ಭಾವ ಮಾತ್ರ. ನೀನು ಕೊಡುವ ಬಂದು ಅಣುವನ್ನು ಆಕೆ ತನ್ನ ಗರ್ಭದಲ್ಲಿರಿಸಿ ಜೀವಂತ ಮಗುವನ್ನು ನಿನ್ನ ಕೈಗೆ ಇಡುತ್ತಾಳೆ. ನಿನ್ನ ಇಡೀ ಜೀವನವನ್ನು ಆಕೆ ಸಂಭಾಳಿಸುತ್ತಾಳೆ ನೀನು ಕೂಡ ಆಕೆಯ ಕಾಳಜಿ ಮಾಡಲೇಬೇಕು. ಪ್ರಸ್ತುತ ಆಕೆಗೆ ಒಳ್ಳೆಯ ಆಹಾರ, ಔಷಧಿ ಮಾತ್ರೆಗಿಂತ ಹೆಚ್ಚು ಬೇಕಾಗಿರುವುದು ನಿನ್ನ ಸಾಂಗತ್ಯ.... ಕಳೆದುಹೋದ ಕಾಲ ಮತ್ತೆ ಸಿಗುವುದಿಲ್ಲ. ತುಸು ಯೋಚಿಸು ಎಂದು ಹೇಳಿ ಆಕೆ ಸುಮಾಳ ಕೋಣೆಯೊಳಗೆ ಹೊರಟು ಹೋದಳು. ಈಗಾಗಲೇ ಮಾನಸಿಕವಾಗಿ, ದೈಹಿಕವಾಗಿ ದಣಿದ ಆತನಿಗೆ ಆಕೆ ಹೇಳಿದ ಮಾತುಗಳೆಲ್ಲವೂ ವೇದ ವಾಕ್ಯದಂತೆ ತೋರಿ ಏನೊಂದೂ ಮಾತನಾಡದೆ ಸುಮ್ಮನೆ ತಲೆಯಾಡಿಸಿದನು.

ಮರುದಿನ ಮುಂಜಾನೆ ಆಸ್ಪತ್ರೆಯ ಕಾರಿಡಾರಿನಲ್ಲೇ ಕುಳಿತಲ್ಲೇ ನಿದ್ದೆ ಹೋಗಿದ್ದ ಆತ ಎಚ್ಚರಗೊಂಡದ್ದು ಜನರ ಓಡಾಟ ಆರಂಭವಾದ ಮೇಲೆ. ನಿಧಾನವಾಗಿ ಕೋಣೆಯ ಒಳಗೆ ಹಣಿಕಿ ನೋಡಿದಾಗ ಆಗ ತಾನೇ ಎದ್ದಿದ್ದ ಸುಮಾ ಆತನನ್ನು ನೋಡಿ ಪೇಲವ ನಗೆ ನಕ್ಕಳು.

ಇದರಿಂದ ತುಸು ನಿರಾಳನಾದ ಆತ ನಿಧಾನವಾಗಿ ಒಳಗೆ ಹೋಗಿ ಆಕೆಯ ಪಕ್ಕದ ಕುರ್ಚಿಯಲ್ಲಿ ಕುಳಿತು ಆಕೆಯ ಎರಡೂ ಕೈಗಳನ್ನು ತನ್ನ ಕೈಯಲ್ಲಿ ಹಿಡಿದು ನನ್ನನ್ನು ಕ್ಷಮಿಸಿ ಬಿಡು ಸುಮಾ.... ಇದುವರೆಗೂ ನಾನು ಮಾಡಿದ ತಪ್ಪುಗಳೆಲ್ಲವೂ ನನಗೆ ಈಗ ಅರಿವಾಗಿದೆ. ಇನ್ನು ಮುಂದೆ ಹೀಗಾಗಲು ಬಿಡುವುದಿಲ್ಲ. ನಾನು ನೆನ್ನೆ ರಾತ್ರಿಯ ನನ್ನ ಆಫೀಸಿಗೆ ಮೇಲ್ ಕಳುಹಿಸುತ್ತೇನೆ ಇನ್ನು ಮುಂದೆ ನಾನು ಮನೆಯಿಂದಲೇ ಕೆಲಸ ಮಾಡುತ್ತೇನೆ. ನಾನೇ ಅಡುಗೆ ತಿಂಡಿ ಎಲ್ಲವನ್ನೂ ಮಾಡುತ್ತೇನೆ.... ನಿನ್ನ ಆರೋಗ್ಯದ ಕುರಿತು ಎಲ್ಲ ರೀತಿಯ ಕಾಳಜಿ ಮಾಡುತ್ತೇನೆ ಎಂದು ಹೇಳಿದಾಗ ಆತನ ಧ್ವನಿಯಲ್ಲಿದ್ದ ಪ್ರಾಮಾಣಿಕತೆಯನ್ನು ಅರಿತ ಆಕೆ ಮೆಲುವಾದ ನಗೆ ಸೂಸುವ ಮೂಲಕ ಒಪ್ಪಿಗೆಯನ್ನು ಅರುಹಿದಳು.

ಗಂಡ ಹೆಂಡರಿಬ್ಬರ ಮುಖದಲ್ಲಿ ಮೂಡಿದ ಸಮಾಧಾನದ ನಗೆಯನ್ನು ಕಂಡು ನಿಧಾನವಾಗಿ ಪಕ್ಕದ ಮನೆಯ ಮಹಿಳೆ ಬಾಗಿಲನ್ನು ಮುಂದೂಡಿ ಹೊರಗೆ ಹೊರಟು ಹೋದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಅಂಚೆ ಅಂದ್ರೆ ತುಂಬಾ ಗೌರವ....

ಅಂಚೆ ಮಹಿಮೆ ಏನು ಅಂತ
ಮನ್ಸು ಕೊಟ್ಟು ಕೇಳ್ರಿ....
ಕಾಗದ ಪತ್ರ ಮುಟ್ಸೊದಷ್ಟೇ
ಅದರ ಕೆಲಸ ಅಲ್ರಿ.....

ಮೊಬೈಲ್ ಇಲ್ಲುದ್ ಕಾಲ್ದಾಗ್
ಇದುವೇ ಮಾಧ್ಯಮವಾಗಿ ಇತ್ತು....
ಅಂದು ಇಂದು ಉಳ್ಕೊಂಡೈತೆ
ಪ್ರಾಮಾಣಿಕ....ನಿಯತ್ತು.....!

ಬಾಂಧವ್ಯಗಳ ಬೆಸೆಯೋ ಕೆಲ್ಸ
ಅಂದಿಗೂ... ಇಂದಿಗೂ.... ಮಾಡ್ತಾ
ದೇಶದ ಪ್ರಗತಿಗೆ ತನ್ನದೇ ಕೊಡುಗೆ
ನೀಡೈತೆ ನಿಮ್ಗೆ ಗೊತ್ತಾ.....?

ನನಗಂತ್ರೂನು ಅಂಚೆ ಅಂದ್ರೆ
ತುಂಬಾ ಗೌರವ ಕಣ್ರಿ....
ನನ್ನ ಬರಹದ ಪ್ರಗತಿಯೊಳಗ
ಇದರ ಪಾತ್ರ ಐತ್ರಿ....

ಅಂಚೆಯಣ್ಣ ಮನಿಗೆ ಬಂದ್ರೆ
ಮೈಮನಸೆಲ್ಲ ಪುಳಕ...
ಹೊಸತು ಸುದ್ದಿ...ಹೊಸದು ಪುಸ್ತಕ....
ಓದುವಂತ ತವಕ....!

– ಶೇಖರಯ್ಯ ಟಿ ಎಚ್ ಎಂ.
ಗೆದ್ದಲಗಟ್ಟೆ.

# ಎಲ್ಲಾ ಧರ್ಮಗಳ ಸಾರ : ಶಾಂತಿಯುತ ಸಹಜೀವನ

## ಸಂಸದ ಈ.ತುಕಾರಾಂ ಹೇಳಿಕೆ | ಹಜ್ ಪವಿತ್ರ ಯಾತ್ರೆ | ಯಾತ್ರಾರ್ಥಿಗಳಿಗೆ ತರಬೇತಿ ಶಿಬಿರ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಜ್ ಆಧ್ಯಾತ್ಮಿಕ ಪ್ರಯಾಣ ಮಾತ್ರವಲ್ಲ, ಅದು ಶ್ರದ್ಧೆ, ಸಹನೆ, ಕಾಳಜಿ ಮತ್ತು ಸಹಜೀವನದ ಪಾಠ ಕಲಿಸುತ್ತದೆ. ವಿವಿಧ ಧರ್ಮಗಳ ಆಚಾರ ವಿಚಾರಗಳು ಬೇರೆಯಾಗಿದ್ದರೂ ಎಲ್ಲಾ ಧರ್ಮಗಳ ಸಾರ ಒಂದೇ ಆಗಿದೆ ಎಂಬುದನ್ನು ಪ್ರತಿಯೊಬ್ಬರು ತಿಳಿದಿರಬೇಕು. ಹಜ್ ಯಾತ್ರೆಯು ಯಶಸ್ವಿಯಾಗಿ ಪೂರ್ಣಗೊಳ್ಳಲು ಸೂಕ್ತ ತರಬೇತಿ ಬಹುಅಮೂಲ್ಯವಾಗಿದೆ ಎಂದು ಸಂಸದ ಈ.ತುಕಾರಾಂ ಹೇಳಿದರು.

ನಗರದ ಸಿದ್ದಿಪ್ರಿಯಾ ಕಲ್ಯಾಣ ಮಂಟಪದಲ್ಲಿ ಗುರುವಾರ 6 ಜಿಲ್ಲೆಗಳ ಹಜ್ ಯಾತ್ರಾರ್ಥಿಗಳಿಗೆ ಹಮ್ಮಿಕೊಂಡಿದ್ದ ತರಬೇತಿ ಶಿಬಿರದಲ್ಲಿ ಮಾತನಾಡಿದರು. ಮುಸ್ಲಿಂ ಸಮುದಾಯಕ್ಕೆ ಹಜ್ ಯಾತ್ರೆ ಬಹು ಪವಿತ್ರವಾಗಿದೆ. ಜೀವಿತಾವಧಿಯಲ್ಲಿ ಕನಿಷ್ಠ ಒಂದು ಬಾರಿ ಹಜ್ ಯಾತ್ರೆ ಮಾಡುವ ಕೋರಿಕೆ ಇರುತ್ತದೆ. ಆಧ್ಯಾತ್ಮಿಕ ಶುದ್ಧೀಕರಣದ ಒಂದು ಮಹತ್ವದ ಹಂತವಾಗಿದ್ದು, ಶಾರೀರಿಕ, ಮಾನಸಿಕ ಮತ್ತು ಆರ್ಥಿಕವಾಗಿ ಸಿದ್ಧತೆ ಅಗತ್ಯವಿದೆ. ಮನುಷ್ಯ ಮತ್ತೊಬ್ಬರ ಏಳಿಗೆಗೆ ಮೆಟ್ಟಿಲಾಗುವ ಮತ್ತು ಪರೋಪಕಾರ ಗುಣ ಬೆಳೆಸಿಕೊಳ್ಳಬೇಕು. ಮತ್ತೊಬ್ಬರ ಮೆಚ್ಚುಗೆಗೆ ಮಾಡುವ ಕೆಲಸಕ್ಕಿಂತ ಆತ್ಮಾಭಿಮಾನದೊಂದಿಗೆ ಮತ್ತೊಬ್ಬರಿಗೆ ಆನಂದ ತರುವ ಕೆಲಸಗಳು ಭಗವಂತನಿಗೆ ಪ್ರಿಯವೆನಿಸುತ್ತವೆ. ಹುಡಾ ಅಧ್ಯಕ್ಷ ಹಾಗೂ ಅಂಜುಮನ್




ಕಮಿಟಿಯ ಅಧ್ಯಕ್ಷ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ಯಾತ್ರಾರ್ಥಿಗಳಿಗೆ ಕರ್ನಾಟಕ ಹಜ್ ತರಬೇತಿ ಫೋರಂ ವತಿಯಿಂದ ಮಾರ್ಗದರ್ಶನ ಮಾಡಿಸುತ್ತಿರು ವುದು ಶ್ಲಾಘನೀಯ ಎಂದರು.

ರಾಜ್ಯ ಹಜ್ ಕಮಿಟ ಅಧ್ಯಕ್ಷ ಜನಾಬ್ ಜುಲ್ಫಿಕರ್ ಅಹಮ್ಮದ್ ಖಾನ್ (ಟಿಪ್ಪು) ಮಾತನಾಡಿ, ಸರಕಾರಗಳು ಹಜ್ ಯಾತ್ರಾರ್ಥಿಗಳಿಗೆ ಸಹಕಾರ ನೀಡುತ್ತಿದ್ದು, ಮುಸ್ಲಿಂ ಬಾಂಧವರು ಸರಕಾರ ನೀಡುವ ಶೈಕ್ಷಣಿಕ ಮತ್ತು ಆರ್ಥಿಕ ಸೌಲಭ್ಯಗಳ ಸದಯಪಯೋಗ ಪಡಿಸಿಕೊಳ್ಳಬೇಕು ಹಾಗೂ ಯಾತ್ರೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸ ಬೇಕು ಎಂದರು.

ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ಕೊಪ್ಪಳ, ಗದಗ ಹಾಗೂ ಬಾಗಲಕೋಟ ಜಿಲ್ಲೆಗಳಿಂದ 639 ಯಾತ್ರಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಅಂಜುಮನ್ ಕಮಿಟಿಯ ಅಧ್ಯಕ್ಷ ಹೆಚ್.ಎನ್. ಮೊಹಮ್ಮದ್ ಇಮಾಮ್ ನಿಯಾಜಿ ಮಾತಾನಾಡಿ, ಹಜ್ ಯಾತ್ರಿಗಳು ನಾಡು, ದೇಶದ ಒಳಿತಿಗಾಗಿ ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಬೇಕು. ಯಾತ್ರಾರ್ಥಿಗಳ ಯಾತ್ರೆಯು ಸುಖಕರವಾಗಿರಲಿ ಎಂದು ಶುಭಕೋರಿದರು.

ಕರ್ನಾಟಕ ಹಜ್ ತರಬೇತಿ ಫೋರಂನ ನಿವೃತ್ತ ಕೆ.ಎ.ಎಸ್. ಅಧಿಕಾರಿ ಎಜಾಜ್ ಅಹಮ್ಮದ್ ಹಾಗೂ ಅವರ ತಂಡದವರು ಈ ಹಜ್ ಯಾತ್ರೆಯಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಮತ್ತು ಧಾರ್ಮಿಕ ಆಚರಣೆಗಳ ಕುರಿತು ತರಬೇತಿಯನ್ನು ನೀಡಿದರು.

ಈ ಕಾರ್ಯಕ್ರಮದಲ್ಲಿ ರಾಜ್ಯ ಹಜ್ ಕಮಿಟಿ ಮಾಜಿ ಅಧ್ಯಕ್ಷ ದಾದ ಸಾಹೇಬ್, ಅಂಜುಮನ್ ಕಮಿಟಿಯ ಪದಾಧಿಕಾರಿಗಳಾದ ಬಿ.ಅನ್ಸರ್ ಬಾಷಾ, ಫಿರೋಜ್ ಖಾನ್, ಅಬೂಬ್ ಕರ್, ಕೆ.ಮೋಸಿನ್, ಸದ್ದಾಂ ಹುಸೇನ್, ಡಾ. ದರ್ವೇಶ್, ಗುಲಾಮ್ ರಸೂಲ್, ವಿಜಯನಗರ ಜಿಲ್ಲಾ ವಕ್ಫ ಬೋರ್ಡ್ ಅಧ್ಯಕ್ಷ ದಾದಾಪೀರ್, ನಗರಸಭೆ ಸದಸ್ಯರಾದ ಅಸ್ಲಾಂ ಮಳಗಿ, ಜಿಲ್ಲಾ ವಕ್ಫ ಮಾಜಿ ಅಧ್ಯಕ್ಷ ಟಿ. ರಫೀಕ್, ಸಮಾಜದ ಮುಖಂಡರಾದ ಹೆಚ್.ಎನ್.ಎಫ್, ಅಲಿಬಾಬಾ, ಖಲಂದರ್, ಖಾಜಾ ಹುಸೇನ್‌ನಿಯಾಜಿ, ಇತರರು ಉಪಸ್ಥಿತರಿದ್ದರು.

# ಭಿನ್ನಾಭಿಪ್ರಾಯಗಳನ್ನು ತೊರೆದು ಸಂಘಟಿತರಾಗಿ

## ಅಸಂಘಟಿತ ಪುರೋಹಿತ ಕಾರ್ಮಿಕರ ಫೆಡ್‌ರೇಶನ್ ರಾಜ್ಯಾಧ್ಯಕ್ಷ ಡಾ.ಜೆ.ಶ್ರೀನಿವಾಸ್ ಮೂರ್ತಿ ಹೇಳಿಕೆ



■ **ಹಂಪಿ ಟೈಮ್ಸ್ ಬಳ್ಳಾರಿ**

ಸಂಘಟನೆಯಲ್ಲಿ ಬಲವಿದೆ, ನಮ್ಮ ನಮ್ಮಲ್ಲಿರುವ ಎಲ್ಲ ಭಿನ್ನಾಭಿಪ್ರಾಯಗಳನ್ನು ಮರೆತು ಎಲ್ಲರೂ ಒಗ್ಗಟ್ಟು ಪ್ರದರ್ಶಿಸಬೇಕು, ಒಗ್ಗಟ್ಟಿನಿಂದ ಸರ್ಕಾರದ ಎಲ್ಲ ಸೌಲಭ್ಯಗಳನ್ನು ಪಡೆಯಬಹುದು ಎಂದು ಅಖಿಲ ಭಾರತ ಅಸಂಘಟಿತ ಪುರೋಹಿತ ಕಾರ್ಮಿಕರ ಫೆಡ್ ರೇಶನ್ ರಾಜ್ಯಾಧ್ಯಕ್ಷ ಡಾ.ಜೆ.ಶ್ರೀನಿವಾಸ್ ಮೂರ್ತಿ ಅವರು ಹೇಳಿದರು.

ನಗರದ ಸತ್ಯನಾರಾಯಣ ಪೇಟೆ ಬಡಾವಣೆಯ ಶ್ರೀ ಸತ್ಯನಾರಾಯಣ ದೇವಾಲಯದ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲಾ ಉದ್ಘಾಟನೆ ಸಮಾರಂಭಕ್ಕೆ ಚಾಲನೆ ನೀಡಿ ಮತನಾಡಿದರು. ತ್ರಿಮತಸ್ಥರು ನಾವೆಲ್ಲರೂ ಒಂದೇ, ನಮ್ಮ ನಮ್ಮಲ್ಲೆ ಭೇಧ ಭಾವ ಬೇಡ, ಎಲ್ಲರೂ ಒಗ್ಗಟ್ಟು ಪ್ರದರ್ಶಿಸಿದರೆ ಸರ್ಕಾರ ನಮ್ಮನ್ನು ಗುರುತಿಸಲಿದ್ದು, ಎಲ್ಲ ಸೌಕರ್ಯಗಳನ್ನು ಪಡೆಯಬಹುದು. ಬ್ರಾಹ್ಮಣ ಸಮುದಾಯದ ಪರವಾಗಿ ನಾನು ಹಗಲಿರುಳು ಶ್ರಮಿಸಲು ಸಿದ್ದ. ಆದರೆ, ಎಲ್ಲರ ಸಹಕಾರ ಅತ್ಯಗತ್ಯ. ಯಾವುದೇ ರೀತಿಯ ಅನ್ಯಾಯಕ್ಕೆ ಒಳಗಾದರೆ ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ ಅಹೋರಾತ್ರಿ ಧರಣಿ ನಡೆಸಿ ನ್ಯಾಯ ಕಲ್ಪಿಸಲು ಪ್ರಾಮಾಣಿಕವಾಗಿ ಶ್ರಮಿಸುವೆ ಎಂದರು.

ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಸಂಘದ ನೋಂದಣಿ ಅಗತ್ಯ, ದೇಶದಲ್ಲೇ ನೋಂದಣಿಯಾದ ಮೊದಲ ಸಂಘ ನಮ್ಮದು, ಎಲ್ಲ ಕಾರ್ಮಿಕರಿಗೆ ಮಹಾಮಾರಿ ಕೋರೋನ ವೇಳೆ ಸರ್ಕಾರ ನಾನಾ ಸವಲತ್ತುಗಳನ್ನು ಕಲ್ಪಿಸಿದರೆ, ನಮ್ಮ ಅರ್ಚಕರಿಗೆ, ಪುರೋಹಿತರಿಗೆ, ಸೇರಿದಂತೆ ಯಾರಿಗೂ ಯಾವುದೇ ಸೌಲಭ್ಯಗಳು ದೊರೆಯಲಿಲ್ಲ. ನಮ್ಮ ರಾಷ್ಟ್ರೀಯ ಅಧ್ಯಕ್ಷರು ದೆಹಲಿಗೆ ತೆರಳಿ ಅಮಿತ್ ಶಾ ಅವರನ್ನು ಭೇಟಿ ಮಾಡಿ ನಮ್ಮ ಸಮಸ್ಯೆಯನ್ನು ಗಮನಕ್ಕೆ ತಂದಾಗ, ಮೊದಲು ಸಂಘವನ್ನು ನೋಂದಣಿ ಮಾಡಿಸಿ ಎಂದರು, ನೋಂದಣಿ ಮಾಡಿಸಿ ಇಲ್ಲಿಗೆ 1 ವರ್ಷ 3 ತಿಂಗಳು ಕಳೆದಿದ್ದು, ಇಲ್ಲಿವರೆಗೆ 18 ಸಾವಿರ ಅರ್ಚಕರು ನೋಂದಣಿ ಮಾಡಿಸಿದ್ದಾರೆ. ಕನಿಷ್ಠ 1 ಲಕ್ಷ ಜನರನ್ನು ನೋಂದಣಿ ಮಾಡಿಸುವ ಗುರಿಯಿದೆ, ಬರುವ ದಿನಗಳಲ್ಲಿ ರಾಜ್ಯ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಭೇಟಿ ಮಾಡಿ, ನಮಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆಯಲು ಪ್ರಾಮಾಣಿಕವಾಗಿ ಶ್ರಮಿಸುವೇ ಎಂದರು.

ಸಂಘದಡಿ ಈಗಾಗಲೇ ಉಚಿತ ವಿಮೆ ಸೌಲಭ್ಯ, ಆರೋಗ್ಯ ವಿಮೆ, ಕಣ್ಣಿನ ಸಮಸ್ಯೆ, ಹೃದಯ ರೋಗ ಸಮಸ್ಯೆಗೆ ಉಚಿತ ಚಿಕಿತ್ಸೆ ಸೇರಿದಂತೆ ನಾನಾ ಸೌಲಭ್ಯಗಳನ್ನು ಕಲ್ಪಿಸಿದೆ, ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು ಎಂದರು.

ಈ ಸಂದರ್ಭದಲ್ಲಿ ಸಂಘದ ಸಂಸ್ಥಾಪಕ, ರಾಷ್ಟ್ರೀಯ ಅಧ್ಯಕ್ಷ ಡಾ.ಎಂ.ಅನಂತ ಮೂರ್ತಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ. ಬಿ.ಎನ್.ಮಹೇಶ್ ಕುಮಾರ್, ರಾಜ್ಯ ಕಾರ್ಯಾಧ್ಯಕ್ಷ ಡಾ.ಸತೀಶ್ ಎಚ್.ಎನ್., ಡಾ.ಅರುಣ್ ಕುಮಾರ್ ಶರ್ಮಾ, ವೇಣುಗೋಪಾಲ್ ಶರ್ಮಾ, ದ್ವಾರಕಾ ನಾಥ್,ಕೇಶವ್ ಶರ್ಮಾ, ಹೇಮಂತ್ ಕುಮಾರ್,

ರಾಜ್ಯ ಕಚೇರಿ ಕಾರ್ಯದರ್ಶಿ ಮಂಜುನಾಥ ಭಟ್, ಸೇರಿದಂತೆ ಇತರರಿದ್ದರು.

ಗುರುರಾಜ್ ಆಚಾರ್ಯ ಕಾರ್ಯಕ್ರಮ ನಿರ್ವಹಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ನೂತನ ಘಟಕದ ಪದಾಧಿಕಾರಿಗಳಿಗೆ ನೇಮಕಾತಿ ಪತ್ರಗಳನ್ನು ನೀಡಿಲಾಯಿತು.

# ಏ. 17 ರಂದು ಗಂಗಾವತಿಯಲ್ಲಿ ಬೃಹತ್ ಉದ್ಯೋಗ ಮೇಳ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಗುಂಜಳ್ಳಿ ಹೀರೆ ನಾಗಪ್ಪ ವಾಣಿಜ್ಯ ಮಹಾವಿದ್ಯಾಲಯ, ಶ್ರೀ ಕೊಟ್ಟೂರೇಶ್ವರ ಕ್ಯಾಂಪಸ್ ಗಂಗಾವತಿ ಇವರ ಸಂಯುಕ್ತಾಶ್ರಯದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಏಪ್ರಿಲ್ 17 ರಂದು ಬೆಳಿಗ್ಗೆ 10 ಗಂಟೆಯಿಂದ 4ರ ವರೆಗೆ ಗಂಗಾವತಿಯಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ಬೃಹತ್ ಉದ್ಯೋಗ ಮೇಳದಲ್ಲಿ ಕೊಪ್ಪಳ, ಹುಬ್ಬಳ್ಳಿ, ಬೆಂಗಳೂರು, ಬೆಳಗಾವಿ, ಬಳ್ಳಾರಿ, ಹಾಸನ, ಶಿವಮೊಗ್ಗ ಇತರೆ ಭಾಗಗಳ ಪ್ರತಿಷ್ಠಿತ ಕಂಪನಿಗಳು ಭಾಗವಹಿಸುತ್ತವೆ. ಈ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳಲಿದ್ದು ಯಾವುದೇ ಶುಲ್ಕ ಇರುವುದಿಲ್ಲ ಎಲ್ಲರಿಗೂ ಉಚಿತ ಪ್ರವೇಶವಿರುತ್ತದೆ. ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ, ಪಿಯುಸಿ/ ತತ್ಸಮಾನ, ಐ.ಟಿ.ಐ, ಡಿಪ್ಲೊಮಾ, ಕಂಪ್ಯೂಟರ್ ತರಬೇತಿ ಹಾಗೂ ಯಾವುದೇ ಪದವಿ ಅಭ್ಯರ್ಥಿಗಳಿಗೆ ನೇರ ಸಂದರ್ಶನ ಮೂಲಕ ನೇಮಕಾತಿ ಮಾಡಿಕೊಳ್ಳಲಾಗುತ್ತದೆ, ಬೃಹತ್ ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು 18 ರಿಂದ 35 ವರ್ಷ ಅರ್ಹ ವಿದ್ಯಾರ್ಹತೆ ಹೊಂದಿದ ನಿರುದ್ಯೋಗಿ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಹಾಗೂ ವಿಕಲಚೇತನ ಅಭ್ಯರ್ಥಿಗಳು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳ 10 ಪ್ರತಿಗಳೊಂದಿಗೆ ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ (ರೆಜ್ಯುಮ್) ಹಾಗೂ 2 ಭಾವಚಿತ್ರಗಳೊಂದಿಗೆ ಮೇಳದಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊ. 9353515518 ಸಂಪರ್ಕಿಸುವಂತೆ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಜಿಲ್ಲಾ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.




# ಹಳ್ಳಿಗರಿಂದ ರಂಗಭೂಮಿ ಜೀವಂತ

## ಲೇಖಕಿ ಅಂಜಲಿ ಬೆಳಗಲ್ ಹೇಳಿಕೆ | ರಕ್ತರಾತ್ರಿ ಪೌರಾಣಿಕ ನಾಟಕ



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಹಳ್ಳಿಗಳು ಜಾನಪದ ಕಲೆ, ಸಾಹಿತ್ಯ, ರಂಗಭೂಮಿಯನ್ನು ಜೀವಂತವಾಗಿರಿಸುತ್ತವೆ ಎಂದು ಲೇಖಕಿ ಅಂಜಲಿ ಬೆಳಗಲ್ ಹೇಳಿದರು.

ವಿಜಯನಗರ ಜಿಲ್ಲೆ ಹಗರಿಬೊಮ್ಮನ ಹಳ್ಳಿಯ ಕೋಗಳಿ ರಥೋತ್ಸವದಲ್ಲಿ ಪಂಡಿತ ಪುಟ್ಟರಾಜ ಕವಿ ಗವಾಯಿಗಳ ಸೇವಾ ಟ್ರಸ್ಟ್ ಆಯೋಜಿಸಿದ್ದ ಪೌರಾಣಿಕ ನಾಟಕ 'ರಕ್ತರಾತ್ರಿ' ಪ್ರಹಸನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಹಳ್ಳಿಗಳೇ ಜನಪದ ಸೊಗಡಿನ ಜೀವನದ ಕಲೆ, ಸಾಹಿತ್ಯ ಮತ್ತು ರಂಗ ಭೂಮಿಗೆ ಜೀವಂತಿಕೆಯ ಪಸೆ ಮೂಡಿಸುವ ತಾಣವಾಗಿವೆ ಎಂದು ತಿಳಿಸಿದರು

ಕಲಾವಿದನಿಗೆ ಜಾತಿ, ಧರ್ಮದ ಭೇದವಿಲ್ಲ. ಕಲಾವಿದನಿಗೆ ಇರುವುದು ಒಂದೆ ಜಾತಿ. ಅದು ಕಲೆ ಮಾತ್ರ. ರಂಗಭೂಮಿ ಕಲೆಗೆ ಮೂಲವೇ ನಮ್ಮ ಹಳ್ಳಿಗಳು. ಜನಪದರಿಂದ ಹುಟ್ಟಿದ ಕಾವ್ಯ, ನಾಟಕ ಎಂದಿಗೂ ಶ್ರೀಮಂತ. ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ ಭಾಗವಹಿಸಿ ಸಮಾಜಮುಖಿಯಾಗಿ ಕೆಲಸ ಮಾಡುವವರು ಮತ್ತು ಭಾವನೆಗಳನ್ನು ಹಂಚಿಕೊಳ್ಳುವವರು ಹೈ ಫೈ ವೇದಿಕೆಗಳಿಗೆ ಮಾತ್ರ ಸೀಮಿತವಾಗಬಾರದು. ಇಂತಹ ಕಟ್ಟ ಕಡೆಯ ಗ್ರಾಮಗಳಿಗೂ ಆಗಮಿಸಿ ತಮ್ಮ ವಿಚಾರಧಾರೆಗಳನ್ನು ಹಂಚಿಕೊಳ್ಳುವ ಮೂಲಕ ಗ್ರಾಮೀಣರಲ್ಲಿ ಉತ್ತೇಜನ ನೀಡಬೇಕು. ರಕ್ತರಾತ್ರಿ ನಾಟಕದ ವೇದಿಕೆ ಕಳೆಗಟ್ಟಿದೆ. ಇಂತಹ ವೇದಿಕೆಯನ್ನು ನಾನು ಜೀವನದಲ್ಲಿ ಮರೆಯಲು ಸಾಧ್ಯವಿಲ್ಲ. ಹಳ್ಳಿಗಳೇ ಕಲೆ ಮತ್ತು ರಂಗಭೂಮಿಯ ಜೀವಾಳ. ಕೋಗಳಿ ಗ್ರಾಮದ ಹೆಸರು ಅಜಾರಾಮರ. ಏಕೆಂದರೆ ರಾಜ್ಯೋತ್ಸವ ಪ್ರಶಸ್ತಿಗಳು ಕೋಗಳಿ ಗ್ರಾಮದ ಕಲಾವಿದರಿಗೆ ಸಂದಿವೆ. ಗ್ರಾಮದಲ್ಲಿ ಹಲವಾರು ಸಮಾಜ ಸೇವೆ ಮಾಡಿ ಬಡತನದಲಿರುವ ಪ್ರತಿಭೆಗಳಿಗೆ ಶಿಕ್ಷಣಕ್ಕೆ ಸಹಾಯ ಹಸ್ತ ನೀಡಿ, ಕಲಾವಿದರನ್ನು ಪೋಷಿಸಿದ ಎಲೆ ಮರೆ ಕಾಯಿಯಂತೆ ಸೇವೆ ಸಲ್ಲಿಸುತ್ತಿರುವ ಕೋಗಳಿ ಬಸವರಾಜ್ ಅವರನ್ನು ಸ್ಮರಿಸಿದರು,

ಬಸವರಾಜ್ ಅವರು ಮಾತನಾಡಿ, ಇಂದು ನಮ್ಮ ಹಳ್ಳಿಗಳಲ್ಲಿ ಕಲಾವಿದರನ್ನು ಮತ್ತು ಶಿಕ್ಷಣವನ್ನು ಗುರುತಿಸುವುದೇ ತುಂಬಾ ಕಷ್ಟದ ಕೆಲಸ. ಏನೇ ತೊಂದರೆ ಆದರು ಜಾತಿ ಭೇದವಿಲ್ಲದ ಒಗ್ಗಟ್ಟಿಗೆ ಬಲ ಎಂಬಂತೆ ಸಹಾಯಕ್ಕೆ ಬರುತ್ತಾರೆ. ಕಲೆ, ಸಾಹಿತ್ಯ, ಶಿಕ್ಷಣಕ್ಕೆ ನಾನು ನನ್ನಿಂದಾದ ಪ್ರೋತ್ಸಾಹ ಸದಾ ನೀಡುತ್ತೇನೆ. ಇಂತಹ ನಾಟಕಗಳು ಇನ್ನೂ ಜೀವಂತ ಇರಬೇಕು. ಕೋಗಳಿ ಎಂಬ ಪುಟ್ಟ ಗ್ರಾಮದಲ್ಲಿ ವಿದ್ಯುತ್ ಇಲ್ಲದೆ ಕಗ್ಗತ್ತಲಲ್ಲಿ ಜೀವನ ನಡೆಯುತ್ತಿದ್ದು, ಆ ಸಂದರ್ಭದಲ್ಲಿ ಕೊಟ್ಟೂರಿನಿಂದ ಕೋಗಳಿಗೆ ವಿದ್ಯುತ್ ಅನ್ನು ಬಸವರಾಜ್ ಅವರ ತಂದೆ ದಿವಂಗತ ಮರುಳಸಿದ್ದನಗೌಡ ಅವರು ಗ್ರಾಮದಲ್ಲಿ ಹಿಟ್ಟಿನಗಿರಣಿ ಹಾಕುವ ಮೂಲಕ ವಿದ್ಯುತ್ ಗ್ರಾಮಕ್ಕೆ ಬರುವಂತಾಯಿತು ಎಂದು ನೆನಪಿಸಿಕೊಂಡರು. ಇದೇವೇಳೆ ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದ ಅಂಜಲಿ ಬೆಳಗಲ್ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಗ್ರಾಮದ ಹಿರಿಯರಾದ ಕೆಂಚಪ್ಪ ಗೌಡ, ಶಂಕ್ರಯ್ಯ, ಉಪಸ್ಥಿತರಿದ್ದರು. ಕವಿ ವೀರೇಶ್ ನಿರೂಪಿಸಿದರು. ಬಳಿಕ ರಕ್ತರಾತ್ರಿ ನಾಟಕ ರಾತ್ರಿಯಿಡೀ ಪ್ರಹಸನಗೊಂಡು ಗ್ರಾಮಸ್ಥರು ಸಂಭ್ರಮಿಸಿದರು.

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ 1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

94486 33038 hampitimes@gmail.com

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ


–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**11–04–2025 – ಶುಕ್ರವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉ.ಫಾಲ್ಗುಣಿ |
| ಯೋಗ | : ಧ್ರುವ |
| ಕರಣ | : ಗರಜ |
| ಸೂರ್ಯೋದಯ | : 06:11:05 |
| ಸೂರ್ಯಾಸ್ತ | : 18:45:02 |
| ರಾಹು ಕಾಲ | : 10:54–12:28 |
| ಯಮಘಂಡ ಕಾಲ | : 15:37–17:11 |
| ಗುಳಿಕ ಕಾಲ | : 07:45–09:20 |



## ತುಂಗಭದ್ರಾ ನೀರಿನ ಮಟ್ಟ

**ಗುರುವಾರ : 10–04–2025**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1585.15 ಅಡಿ |
| ಒಳ ಹರಿವು | 3009 ಕ್ಯುಸೆಕ್ |
| ಹೊರ ಹರಿವು | 2800 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.424 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

**ಕಳೆದ ವರ್ಷ ಇದೇ ದಿನ**

| | |
|---|---|
| ಇಂದಿನ ಮಟ್ಟ | 1579.12 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 232 ಕ್ಯುಸೆಕ್ |
| ಸಾಮರ್ಥ್ಯ | 4.057 ಟಿಎಂಸಿ |

## 6ನೇ ತರಗತಿಗೆ ಪ್ರತಿಷ್ಠಿತ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ರಾಯಚೂರು:**
ಸಮಾಜ ಕಲ್ಯಾಣ ಇಲಾಖೆಯಿಂದ 2025–26ನೇ ಸಾಲಿಗೆ ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು 6ನೇ ತರಗತಿಗೆ ಪ್ರತಿಷ್ಠಿತ ಶಾಲೆಗಳಿಗೆ ದಾಖಲಿಸಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೇ.03 ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ವೆಬ್‌ಸೈಟ್ ವಿಳಾಸ: www.sw.kar.nic.in ಗೆ ಭೇಟಿ ನೀಡಬಹುದಾಗಿದೆ

# ನೀನು ಬದುಕು, ಇತರರನ್ನೂ ಬದುಕಿಸು

## ಮಹಾವೀರರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಅಹಿಂಸೆ ಮಾರ್ಗದಲ್ಲಿ ನಡೆಯಬೇಕಾಗಿದೆ



**■ ಹಂಪಿ ಟೈಮ್ಸ್ ಬಳ್ಳಾರಿ**
ಮಹಾವೀರ ಜಯಂತಿ ಕೇವಲ ಧಾರ್ಮಿಕ ಹಬ್ಬವಲ್ಲ, ಬದಲಾಗಿ ಕರುಣೆ, ನೈತಿಕತೆ ಮತ್ತು ಅಹಿಂಸೆಯನ್ನು ಪ್ರತಿಬಿಂಬಿಸುವ ದಿನವಾಗಿದ್ದು, ಸತ್ಯ, ಕ್ಷಮೆ ಮತ್ತು ಭೌತಿಕತೆಯಿಂದ ನಿರ್ಲಿಪ್ತತೆಯ ಮಾರ್ಗವನ್ನು ಅನುಸರಿಸುವ ಮೂಲಕ ಸರಳ ಮತ್ತು ಶಾಂತಿಯುತ ಜೀವನವನ್ನು ನಡೆಸಲು ಕಲಿಸುತ್ತದೆ ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಮುಲ್ಲಂಗಿ ನಂದೀಶ್ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ತೇರುಬೀದಿ ರಸ್ತೆಯ ಶ್ರೀ ಪಾರ್ಶ್ವನಾಥ್ ಭವನ ಸಭಾಂಗಣದಲ್ಲಿಗುರುವಾರಆಯೋಜಿಸಲಾಗಿದ್ದ ಭಗವಾನ್ ಮಹಾವೀರ ಜಯಂತಿ ಕಾರ್ಯಕ್ರಮವನ್ನು ಮಹಾವೀರ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ಮಹಾವೀರರು ತಮ್ಮ 30 ನೇ ವಯಸ್ಸಿನಲ್ಲಿ ಜ್ಞಾನೋದಯವನ್ನು ಹುಡುಕುತ್ತಾ ತಮ್ಮ ಐಷರಾಮಿ ಜೀವನವನ್ನು ತ್ಯಜಿಸಿ 12 ವರ್ಷಗಳ ತೀವ್ರ ಧ್ಯಾನ ಮತ್ತು ತಪಸ್ಸಿನ ನಂತರ, ಅವರು ಕೇವಲ ಜ್ಞಾನ ಪಡೆದು ತಮ್ಮ ಜೀವನದ ಉಳಿದ ಭಾಗವನ್ನು ಅಹಿಂಸೆ, ಸತ್ಯ ಮತ್ತು ಸ್ವಯಂ–ಶಿಸ್ತಿನ ಬೋಧನೆಗಳನ್ನು ಹರಡಲು ಕಳೆದರು ಎಂದು ಮಹಾವೀರರ ಜೀವನದ ಬಗ್ಗೆ ಪರಿಚಯಿಸಿದರು.

ಸಾಧ್ವಜಿ ಶ್ರೀ ಸೂರ್ಯಪ್ರಭ ಶ್ರೀಜಿ ಅವರು ಕಾರ್ಯಕ್ರಮದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿ, ಜೈನ ಧರ್ಮದ ಇಪ್ಪತ್ತನಾಲ್ಕನೇ ತೀರ್ಥಂಕರರಾದ ಭಗವಾನ್ ಮಹಾವೀರರು ಚಿಕ್ಕ ವಯಸ್ಸಿನಲ್ಲಿಯೇ ಸನ್ಯಾಸ ಸ್ವೀಕರಿಸಿದವರು. ಸಹಾನುಭೂತಿಯ ಹೊಸ ಧರ್ಮವನ್ನು ಜಗತ್ತಿಗೆ ಪರಿಚಯಿಸಿದ್ದ ಭಗವಾನ್ ಮಹಾವೀರರು ಅಹಿಂಸೆ, ಪ್ರೀತಿ ಮತ್ತು ತಪಸ್ವಿ ಆಗಿದ್ದರು ಎಂದರು.

ಮಹಾವೀರ ಕ್ರಿ.ಪೂ 599 ರಲ್ಲಿ ಬಿಹಾರದ ಲಿಚ್ಛಾವಿ ರಾಜವಂಶದ ಮಹಾರಾಜ ಸಿದ್ಧಾರ್ಥ ಮತ್ತು ರಾಣಿ ತ್ರಿಶಾಲಾ ದಂಪತಿಗೆ ಜನಿಸಿದರು ಎಂದು ಇತಿಹಾಸದ ಪುಟಗಳು ಹೇಳುತ್ತವೆ. ಬಾಲ್ಯದಲ್ಲಿ ಮಹಾವೀರರ ಹೆಸರು ವರ್ಧಮಾನ್. ಮಹಾವೀರರು. ಸಮೃದ್ಧ ಜೀವನ ಮತ್ತು ಶಾಂತಿಯ ಮಾರ್ಗಕ್ಕಾಗಿ ಐದು ತತ್ವಗಳನ್ನು ನೀಡಿದ್ದಾರೆ. ಆ ತತ್ವಗಳೆಂದರೆ ಅಹಿಂಸೆ, ಸತ್ಯ, ಅಸ್ಥಿತ್ವ, ಬ್ರಹ್ಮಚರ್ಯ ಮತ್ತು ಭೌತಿಕವಲ್ಲದ ವಸ್ತುಗಳಿಂದ ದೂರವಿರುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳ್ಳಾರಿ ಕೆ.ಸುಧಾ ತಂಡದಿಂದ ಭಗವಾನ್ ಮಹಾವೀರರ ಕುರಿತ ಭಕ್ತಿ ಗೀತೆಗಳನ್ನು ಪ್ರಸ್ತುತ ಪಡಿಸಿದರು ಮತ್ತು ಜೈನ ಸಮುದಾಯದ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಪ್ರದರ್ಶನ ನಡೆಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ಗಾದೆಪ್ಪ.ಪಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜೈನ್ ಸಂಘದ ಅಧ್ಯಕ್ಷ ಉತ್ಸವ್ ಲಾಲ್ ಜೀ ವರ್ಗೀಚ ಸೇರಿದಂತೆ ಸಮುದಾಯ ಮುಖಂಡರು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಇತರರು ಉಪಸ್ಥಿತರಿದ್ದರು.

*ಸಂಭ್ರಮದ ಮೆರವಣಿಗೆ:*
ಮಹಾವೀರ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ವಿವಿಧ ಸಾಂಸ್ಕೃತಿಕ ಕಲಾ ತಂಡಗಳನ್ನೊಳಗೊಂಡು ನಗರದಲ್ಲಿ ಸಂಭ್ರಮದಿಂದ ನಡೆಯಿತು.

ಮೆರವಣಿಗೆಯು ನಗರದ ಶ್ರೀ ಪಾರ್ಶ್ವನಾಥ್ ಭವನದಿಂದ ಆರಂಭವಾಗಿ ತೇರು ಬೀದಿ, ಕಾಳಮ್ಮ ಬೀದಿ, ಬೆಂಗಳೂರು ರಸ್ತೆ, ಬ್ರೂಸ್ ಪೇಟೆ ಪೋಲಿಸ್ ಠಾಣೆ ರಸ್ತೆ ಮೂಲಕ ಶ್ರೀ ಪಾರ್ಶ್ವನಾಥ್ ಭವನ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.



**■ ಹಂಪಿ ಟೈಮ್ಸ್ ರಾಯಚೂರು**
ಭಗವಾನ ಮಹಾವೀರರು ಅಹಿಂಸೆಯ ಪ್ರತಿಪಾದಕರಾಗಿದ್ದು, ವಿಶ್ವದಲ್ಲಿ ಶಾಂತಿ ಮತ್ತು ಅಹಿಂಸೆ ಬಯಸಿ ತ್ಯಾಗ, ತಪಸ್ಸು ಮಾಡಿರುವರು. ಈ ಆಧುನೀಕತೆಯಲ್ಲಿ ನಾವೆಲ್ಲ ಮಹಾವೀರರ ತತ್ವಾದರ್ಶಗಳನ್ನು ಅಳವಡಿಸಿಕೊಂಡು ಅಹಿಂಸೆ ಮಾರ್ಗದಲ್ಲಿ ನಡೆಯಬೇಕಾಗಿದೆ ಎಂದು ರಾಯಚೂರು ತಹಶೀಲ್ದಾರ್ ಸುರೇಶ ವರ್ಮ ಅವರು ಹೇಳಿದರು.

ನಗರದಲ್ಲಿ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಗುರುವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಭಗವಾನ್ ಮಹಾವೀರ ಜಯಂತಿಗೆ ಚಾಲನೆ ನೀಡಿ ಮಾತನಾಡಿದರು. ಜೈನ ಧರ್ಮೀಯರು ಶಾಂತಿ ಪ್ರಿಯರು ಮತ್ತು ಅಹಿಂಸಾ ವಾದಿಗಳು. ಅವರ ನಡೆ–ನುಡಿ ಸಮಾಜಕ್ಕೆ ಮಾದರಿಯಾಗಿದೆ. ಆಧುನೀಕತೆಯಲ್ಲಿ ಶಾಂತಿ ಮತ್ತು ಅಹಿಂಸೆಯ ತತ್ವಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ. ಹೀಗಾಗಿ ಮಹಾವೀರರ ತತ್ವಾದರ್ಶಗಳನ್ನು ನಾವೆಲ್ಲ ಪಾಲಿಸಬೇಕಾಗಿದೆ ಎಂದರು.

ವಿವಿಧ ಗಣ್ಯರಿಂದ ಮಾಲಾರ್ಪಣೆ: ಇದಕ್ಕೂ ಮುಂಚೆ ನಗರದ ಭಗವಾನ್ ಮಹಾವೀರ ಸರ್ಕಲ್ ಹತ್ತಿರ ಮಹಾವೀರ ಪುತ್ಥಳಿಗೆ ರಾಯಚೂರು ನಗರ ಕ್ಷೇತ್ರದ ಶಾಸಕ ಡಾ.ಶಿವರಾಜ ಎಸ್. ಪಾಟೀಲ್, ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ನರಸಿಂಹಲು ಮಾಡಗಿರಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ರಾಯಚೂರು ತಹಶೀಲ್ದಾರ್ ಸುರೇಶ್ ವರ್ಮ ಸೇರಿದಂತೆ ಇತರೆ ಗಣ್ಯ ವ್ಯಕ್ತಿಗಳಿಂದ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಲಾಯಿತು.

ಇದೇ ಸಂದರ್ಭದಲ್ಲಿ ಉಪನ್ಯಾಸಕರಾಗಿ ಶ್ರೀಮತಿ ಪ್ರೇಮಲತಾ ಸೇರಿದಂತೆ ಸಮಾಜದ ಮುಖಂಡರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

**■ ಹಂಪಿ ಟೈಮ್ಸ್ ಕೊಪ್ಪಳ**
ಅಹಿಂಸಾ ತತ್ವಗಳ ಪ್ರತಿಪಾದಕ ಭಗವಾನ್ ಮಹಾವೀರ ಜಯಂತಿಯ ಅಂಗವಾಗಿ ಕೊಪ್ಪಳದಲ್ಲಿ ಗುರುವಾರ ಮಹಾವೀರರ ಭಾವಚಿತ್ರದ ಭವ್ಯ ಮೆರವಣಿಗೆ ಅದ್ದೂರಿಯಾಗಿ ಜರುಗಿತು.

ಕೊಪ್ಪಳ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕೊಪ್ಪಳ ನಗರಸಭೆ ಸಹಯೋಗದಲ್ಲಿ ಭಗವಾನ್ ಮಹಾವೀರರ ಜಯಂತಿಯನ್ನು ಜಿಲ್ಲಾ ಕೇಂದ್ರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗಿದ್ದು, ಮೆರವಣಿಗೆಗೆ ನಗರದ ಅಶೋಕ್ ವೃತ್ತದಲ್ಲಿ ಚಾಲನೆ ನೀಡಲಾಯಿತು. ಈ ವೇಳೆ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ತಹಶಿಲ್ದಾರರ ವಿಠ್ಠಲ ಚೌಗಲಾ, ಇತರೆ ಜನಪ್ರತಿನಿಧಿಗಳು ಹಾಗೂ ಸಮಾಜದ ಮುಖಂಡರು ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

*ಮೆರವಣಿಗೆಯಲ್ಲಿ ಭಾಗಿ:* ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ ಅವರು ಮೆರವಣಿಗೆಯಲ್ಲಿ ಪಾಲ್ಗೊಂಡು, ಸಮಾಜದವರಿಗೆ ಶುಭ ಕೋರಿದರು.



ಈ ಸಂದರ್ಭದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮ್ಜದ್ ಪಟೇಲ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ನಗರಸಭೆ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಅಕ್ಬರಪಾಶಾ ಪಲ್ಟನ್, ಸದಸ್ಯರಾದ ಮಹೀಂದ್ರಾ ಛೋಪ್ರಾ, ರಾಜಶೇಖರ ಆಡೂರ ಹಾಗೂ ಇತರ ಸದಸ್ಯರು, ಜೈನ ಸಮಾಜದ ಮುಖಂಡರಾದ ಹೀರೋ ಜಿರಾವಲಾ, ರಾಜೇಂದ್ರ ಜೈನ, ರಾಜೇಶ ಲುಂಕಡ, ಮಹಾವೀರ ಸಂಕಲೇಚಾ, ಮಹೇಂದ್ರ ಲುಂಕಡ, ಪ್ರಮೋದ ಜೈನ, ದೀಪಚಂದ ನಿರ್ಮಲ ಚೋಪ್ರಾ, ಭರತ ಮೆಹ್ತಾ, ಜವಾಹರಲಾಲ, ಅಶೋಕ, ದಿಲೀಪ, ಮಹಾವೀರ ವಿನಾಯಕಿಯಾ, ಗೌತಮ ಪಾಲರೇಚಾ, ಕವಿತಾ ಜಿರಾವಲಾ, ವೈಶಾಲಿ ಧಾನೇಶಾ, ಜ್ಯೋತಿ ಪಾರಿಜಾತ, ಸಂಗೀತಾ ಚೋಪ್ರಾ, ಅನಿತಾ ಚೋಪ್ರಾ, ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

*ಅದ್ದೂರಿ ಮೆರವಣಿಗೆ:* ಭಗವಾನ್ ಮಹಾವೀರ ಜಯಂತಿ ಅಂಗವಾಗಿ ಮಹಾವೀರರ ಭಾವಚಿತ್ರದ ಮೆರವಣಿಗೆ ನಗರದ ಅಶೋಕ ವೃತ್ತದಿಂದ ಪ್ರಾರಂಭಗೊಂಡು ಜವಾಹರ ರಸ್ತೆ, ಗಡಿಯಾರ ಕಂಬದ ಮಾರ್ಗವಾಗಿ ಕೋಟೆ ರಸ್ತೆಯ ಜೈನ್ ಬಸದಿವರೆಗೆ ಸಾಗಿ, ಅಲ್ಲಿ ಪೂಜಾ ಕಾರ್ಯಕ್ರಮ ಜರುಗಿತು. ನಂತರ ಅಲ್ಲಿಂದ ಪುನಃ ಗಡಿಯಾರ ಕಂಬದ ಮಾರ್ಗವಾಗಿ ಗೋಶಾಲೆ ರಸ್ತೆಯ ಜೈನ್ ಮಂದಿರದ ವರೆಗೆ ವಿಜ್ರಂಭಣೆಯಿಂದ ನಡೆಯಿತು. ಮೆರವಣಿಗೆಯಲ್ಲಿ ಸಮಾಜದ ಮುಖಂಡರು, ಮಹಿಳೆಯರು, ಮಕ್ಕಳು ಭಾಗವಹಿಸಿದ್ದರು.

# ಬದುಕಿ–ಬದುಕಲು ಬಿಡಿ




**■ ಹಂಪಿ ಟೈಮ್ಸ್ ಕೊಟ್ಟೂರು.**
ಮಹಾವೀರರು ನೀಡಿದ ಸಂದೇಶ ಒಂದು ಧರ್ಮಕ್ಕೆ ಸೀಮಿತವಲ್ಲ. "ನೀನು ಬದುಕು, ಇತರೆ ಜೀವಿಗಳು ಬದುಕಲು ಬಿಡು" ಎಂದು ಭಗವಾನ್ ಮಹಾವೀರರು ಇಡೀ ವಿಶ್ವಕ್ಕೆ ಶಾಂತಿ ಮತ್ತು ಅಹಿಂಸೆಯನ್ನು ಮನುಕುಲಕ್ಕೆ ಭೋದಿಸಿದರು ಎಂದು ರಾಜೇಂದ್ರ ಜೈನ್ ಹೇಳಿದರು.

ಕೊಟ್ಟೂರು ತಾಲೂಕ ಕಚೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ನಡೆದ ಭಗವಾನ್ ಮಹಾವೀರರ ಜನ್ಮ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಮಹಾವೀರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರೊಂದಿಗೆ ಪ್ರಾರಂಭಿಸಿ ನಂತರ ಮಾತನಾಡಿದರು. ಪಂಚ ಪರಮೇಷ್ಠಿ ಮಹಾಮಂತ್ರ ಬೋಧಿಸಿದರು. ಆಚಾರ್ಯರು, ಗುರುಗಳು, ಉಪಾಧ್ಯಾಯರು ಮುಂತಾದವರಿಗೆ ಗೌರವಿಸುವುದನ್ನ ತಿಳಿಸಿದ್ದಾರೆ.

ಪ್ರಸ್ತುತ ಜಗತ್ತಿಗೆ ಮಹಾವೀರರ ಅಹಿಂಸೆಯ ಮಂತ್ರ ಬೇಕಿದೆ. ಸಕಲ ಜೀವಕ್ಕೆ ಶಾಂತಿಯನ್ನು ಕೋರಿದ ಅವರ ಸಂದೇಶವನ್ನು ನಾವೆಲ್ಲರೂ ಪಾಲಿಸಬೇಕಿದೆ ಎಂದರು.


ಶ್ವೇತಾಂಬರ ಸಮಾಜದ ಅಧ್ಯಕ್ಷರಾದ ಬಾಬುಲಾಲ್ ಜೈನ್ ಮಾತನಾಡಿ, ಈ ದಿನ ಪಟ್ಟಣದಲ್ಲಿ ಪ್ರಾಣಿವಧೆ, ಮಾಂಸದ ಅಂಗಡಿ ವ್ಯಾಪಾರ ನಿಲ್ಲಿಸುವ ಮೂಲಕ ಪ್ರಾಣಿ ಹಿಂಸೆಯನ್ನು ತಡೆಯಲು ಪ್ರಯತ್ನಿಸ ಬೇಕಿದೆ. ಮುಂದಿನ ದಿನಗಳಲ್ಲಿ ನಾವೆಲ್ಲರೂ ಸಂಘಟಿತರಾಗಿ ಕಾರ್ಯಕ್ರಮವನ್ನು ಇನ್ನು ಅರ್ಥಪೂರ್ಣವಾಗಿ ಆಚರಿಸೋಣ ಎಂದರು.

ಪಟ್ಟಣ ಪಂಚಾಯತಿ ಸದಸ್ಯ ಲಕ್ಷ್ಮಿ ಚೆನ್ನಪ್ಪ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಪ್ರತಿಭಾ ಎಂ ತಹಸೀಲ್ದಾರ್ ಗ್ರೇಟ್_2 ಇವರು ಮಹಾವೀರರು ಮನುಕುಲಕ್ಕೆ ನೀಡಿದ ಸಂದೇಶವನ್ನು ನಾವೆಲ್ಲರೂ ಪಾಲಿಸಿಕೊಂಡು ಹೋಗಬೇಕೆಂದರು.

ಕಾರ್ಯಕ್ರಮದಲ್ಲಿ ದಿಗಂಬರ ಸಮಾಜದ ಅಧ್ಯಕ್ಷರಾದ ಬ್ರಹ್ಮೇಶ್ ಕುಮಾರ್, ಜೈನ ಸಮಾಜದ ಮುಖಂಡರು ರಾಜೇಂದ್ರ ಕುಮಾರ್ ಜೈನ್, ಸಮೀರ್ ಮಲ್ಕಿ ಚೋಪ್ರಾ, ಕೊಟ್ರಪ್ಪ ಜೈನರ್, ಸತೀಶ್ ಜಾಯಿನರ್, ರಾಮಚಂದ್ರಪ್ಪ ಜೈನರ್ , ಧರಣೇಂದ್ರಪ್ಪ ಜಯನಗರ್ , ಕಂದಾಯ ನಿರೀಕ್ಷಕ ಹಾಲಸ್ವಾಮಿ, ಗ್ರಾಮ ಆಡಳಿತ ಅಧಿಕಾರಿ ಹರೀಶ್, ಸಿಬ್ಬಂದಿ ಮಂಜುನಾಥ್, ಹನುಮಂತ ಹಾಜರಿದ್ದರು. ಸಿ. ಮ. ಗುರು ಬಸವರಾಜ್ ಸ್ವಾಗತಿಸಿ ನಿರೂಪಿಸಿದರು.

# ಶಿಕ್ಷಕ ಪ್ರಕಾಶ್ ರಾಜ್ಯ ಮಟ್ಟಕ್ಕೆ ಆಯ್ಕೆ

**50–60 ವರ್ಷ ವಯೋಮಿತಿಯ ಪುರುಷರ ವಿಭಾಗದ 100 ಮೀಟರ್ ಓಟದಲ್ಲಿ ಪ್ರಥಮ**



**■ ಹಂಪಿ ಟೈಮ್ಸ್ ಹೊಸಪೇಟೆ**
ತಾಲೂಕಿನ ಕಾಕುಬಾಳು ಸ.ಹಿ.ಪ್ರಾ.ಶಾಲೆಯ ಶಿಕ್ಷಕ ಪ್ರಕಾಶ್ ಅವರು 50–60 ವರ್ಷ ವಯೋಮಿತಿಯ ಪುರುಷರ ವಿಭಾಗದಲ್ಲಿ ಗುರುವಾರ ನಡೆದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾದರು. ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ವಿಜಯನಗರ ಜಿಲ್ಲಾ ಶಾಖೆ ಇವರ ಸಂಯುಕ್ತಾ ಶ್ರಯದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಈ ಬಾರಿ ಪ್ರಥಮ ಸ್ಥಾನ ಪಡೆದು, 5ನೇ ಬಾರಿಗೆ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಮಲ್ಲಿಕಾರ್ಜುನಗೌಡ, ಸಂಘದ ಪದಾಧಿಕಾರಿಗಳು, ಜಿಲ್ಲಾದೈಹಿಕ ಶಿಕ್ಷಣಾಧಿಕಾರಿ ಮಂಜುನಾಥ ಬಣಕಾರ್ ಹಾಗೂ ಜಾಕೀರ್, ಪ್ರಶಸ್ತಿ ಪತ್ರವನ್ನು ನೀಡಿ ಗೌರವಿಸಿದರು.

ಶಿಕ್ಷಕನ ಸಾಧನೆಗೆ ಉಪನಿರ್ದೇಶಕರು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಸಿಬ್ಬಂದಿ, ಮುಖ್ಯೋಪಾಧ್ಯಯರು ಹರ್ಷ ವ್ಯಕ್ತಪಡಿಸಿದರು.

# ಪಡಿತರ ಚೀಟಿ ಸದಸ್ಯರಿಂದ ಇ–ಕೆವೈಸಿ ಕಡ್ಡಾಯ

**■ ಹಂಪಿ ಟೈಮ್ಸ್ ರಾಯಚೂರು**
ಇಲ್ಲಿನ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ ಜಿಲ್ಲೆಯ ಪಡಿತರ ಚೀಟಿ ಸದಸ್ಯರು ಇ–ಕೆವೈಸಿ ಮಾಡಿಸುವುದು ಕಡ್ಡಾಯವಾಗಿದ್ದು, ಇ–ಕೆವೈಸಿ ಸದಸ್ಯರು ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿಗಳಲ್ಲಿ ಈ ತಿಂಗಳ ಅಂತ್ಯದವರೆಗೆ ಇ–ಕೆವೈಸಿಯನ್ನು ಕಡ್ಡಾಯವಾಗಿ ಮಾಡಿಸಬೇಕೆಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಅವರು ತಿಳಿಸಿದ್ದಾರೆ.

ಇ–ಕೆವೈಸಿ ಮಾಡಿಸುವ ಸಮಯದಲ್ಲಿ ಎಸ್.ಸಿ/ಎಸ್.ಟಿ/ ಇತರೆ ಆಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಸಂಖ್ಯೆಯನ್ನು, ಅನಿಲ ಸಂಪರ್ಕ ಹೊಂದಿದ್ದಲ್ಲಿ ಗ್ರಾಹಕರ ಸಂಖ್ಯೆಯನ್ನು ಮತ್ತು ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಸಂಬಂಧ ಪಟ್ಟ ನ್ಯಾಯಬೆಲೆ ಅಂಗಡಿ ಡೀಲರರಿಗೆ ಸಲ್ಲಿಸಲು ತಿಳಿಸಲಾಗಿದೆ.

ಈ ಕಾರ್ಯಾಕ್ಕೆ ಪಡಿತರ ಚೀಟಿಯಲ್ಲಿನ ಸದಸ್ಯರು ಯಾವುದೇ ಹಣ ನೀಡುವಂತ್ತಿಲ್ಲ. ಇದು ಸಂಪೂರ್ಣ ಉಚಿತವಾಗಿದ್ದು, ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಹಣ ಕೇಳಿದ್ದಲ್ಲಿ ಮಾನ್ಯ ಆಯುಕ್ತರ ಕಚೇರಿಯ ಟ್ರೋಲ್ ಫ್ರೀ ದೂಡಿವಾಣಿ ಸಂಖ್ಯೆ: 1967ಗೆ ಅಥವಾ ಆಹಾರ ಇಲಾಖೆಯ ಉಪ ನಿರ್ದೇಶಕರ ಕಚೇರಿ, ಸಂಬಂಧಪಟ್ಟ ತಾಲ್ಲೂಕು ಆಹಾರ ಶಾಖೆ ಕಚೇರಿಗೆ ದೂರು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.